# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಹರಿಶ್ಚಂದ್ರ ಚರಿತ್ರೆ (ಸತ್ಯಹರಿಶ್ಚಂದ್ರ)

ಕವಿ

## ನಾರಾಯಣ ನಾಗಪ್ಪ ಜೋಷಿ

ಅಂತರಜಾಲ ಆವೃತ್ತಿ ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ನವೆಂಬರ್ ೩೦, ೨೦೧೯

# ಯಕ್ಷವಾಹಿನಿ®

Email: yakshaprasangakosha@co.gmailm, yakshavahini@co.gmailm Blog: www.yakshaprasangakosha.com

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠೆ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್ , ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ  ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ  ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**
ಪೌರಾಣಿಕ

**ಆಧಾರ ಗ್ರಂಥ:**

ಭಾಗವತ, ರಾಘವಾಂಕ ಕವಿಯ ಹರಿಶ್ಚಂದ್ರ ಕಾವ್ಯ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**
ಪಾವಂಜೆ ಗುರುರಾವ್ ಅಂಡ್ ಸನ್ಸ್, ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ

**ಹಕ್ಕುಸ್ವಾಮ್ಯ ವಿವರ:**
ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**
೩೬೬

**ಪಾತ್ರಗಳು:**
ಹರಿಶ್ಚಂದ್ರ, ಮಂತ್ರಿ, ದೇವೇಂದ್ರ, ವಶಿಷ್ಠ, ವಿಶ್ವಾಮಿತ್ರ, ಪರಾಶರ ಮುನಿ, ಚಂದ್ರಮತಿ, ಲೋಹಿತಾಶ್ವ, ಬೇಡರು, ಚಾಂಡಾಲಕನ್ಯೆಯರು, ನಕ್ಷತ್ರಿಕ, ಬ್ರಾಹ್ಮಣ, ಅವನ ಹೆಂಡತಿ, ವೀರಬಾಹುಕ, ಕೊರವಂಜಿ, ಕಾಶಿರಾಜ, ಬ್ರಹ್ಮ, ವಿಷ್ಣು, ಈಶ್ವರ, ಚಾರಕರು, ದಿಕ್ಪಾಲಕರು.

**ಕಥಾಸಾರಾಂಶ:**
ದೇವೇಂದ್ರನ ಸಭೆಯಲ್ಲಿ ಸತ್ಯವಂತರು ಯಾರು ಎಂಬ ಪ್ರಶ್ನೆಗೆ ವಶಿಷ್ಠರು ಹರಿಶ್ಚಂದ್ರನೆಂದು ಹೇಳಿದಾಗ ಅವನನ್ನು ಸತ್ಯ ಭ್ರಷ್ಟನನ್ನಾಗಿ ಮಾಡುತ್ತೇನೆ ಎಂದು ವಿಶ್ವಾಮಿತ್ರನ ಪ್ರತಿಜ್ಞೆ. ಹರಿಶ್ಚಂದ್ರನಲ್ಲಿಗೆ ಹೋಗಿ ಹೊನ್ನು ದಾನ ಪಡೆದು ಅವನಲ್ಲಿ ನ್ಯಾಸವಾಗಿಡುವುದು. ಚಾಂಡಾಲ ಸ್ತ್ರೀಯರನ್ನು ಸೃಷ್ಟಿಸಿ ಹರಿಶ್ಚಂದ್ರನೆದುರು ನೃತ್ಯ ಮಾಡಿ ಮೆಚ್ಚಿಸಿ ಬಹುಮಾನವಾಗಿ ಮದುವೆಯಾಗಲು ಹೇಳಿಸುವುದು. ಹರಿಶ್ಚಂದ್ರ ಸತ್ಯಕ್ಕಾಗಿ ದೇಶಕೋಶವನ್ನೇ ಬೇಕಾದರೆ ಕೊಡುವೆನೆನ್ನಲು ಅದನ್ನೇ ದೃಢಪಡಿಸಿ ಪಡೆದು ಮೊದಲು ನ್ಯಾಸವಾಗಿಟ್ಟ ಹೊನ್ನನ್ನು ಕೊಡಲು ಹೇಳುವುದು. ಕೊನೆಗೆ ಹರಿಶ್ಚಂದ್ರ ರಾಜ್ಯಭ್ರಷ್ಟನಾಗಿ ನಕ್ಷತ್ರಿಕನೊಡನೆ ಕಾಶಿಗೆ ಹೋಗಿ ಸತಿಸುತರನ್ನು ಮಾರಿ ಹಣ ಕೊಡುವುದು. ಅದು ಸಾಲದೇ ಇದ್ದಾಗ ತನ್ನನ್ನೇ ಚಾಂಡಾಲನಿಗೆ ಮಾರಿಕೊಳ್ಳುವುದು. ಮಗ ಲೋಹಿತಾಶ್ವನಿಗೆ ಹಾವು ಕಚ್ಚಿ ಸತ್ತಾಗ ಸ್ಮಶಾನಕ್ಕೆ ಬಂದರೆ ಹಣ ಕೊಡದೇ ಸುಡಲು ಸಾಧ್ಯವಿಲ್ಲ ಎಂದು ಚಂದ್ರಮತಿಗೆ ಹೇಳುವುದು. ಅವಳು ಹಣವನ್ನು ಗಳಿಸಿ ಬರುವಾಗ ಹೆಣವನ್ನು ನೋಡಿ ಮಗನದೇ ಎಂದು ಭಾವಿಸಿ ಮರುಗುವುದು. ರಾಜ ಅವಳೇ ಕೊಲೆ ಮಾಡಿದವಳು ಎಂದು ದೇಹಾಂತ ಶಿಕ್ಷೆ ವಿಧಿಸಿ ಹರಿಶ್ಚಂದ್ರನಿಗೆ ಅವಳನ್ನು ಕೊಲ್ಲಲು ಆಜ್ಞಾಪಿಸುವುದು. ಹೆಂಡತಿಯನ್ನು ಕೊಲ್ಲಲು ಸಿದ್ಧನಾದಾಗ ಈಶ್ವರನು ಪ್ರತ್ಯಕ್ಷನಾಗಿ ಅನುಗ್ರಹಿಸುವುದು. ವಿಶ್ವಾಮಿತ್ರ ಸೋಲೊಪ್ಪಿಕೊಂಡು ಸತ್ಯಹರಿಶ್ಚಂದ್ರನಿಗೆ ರಾಜ್ಯವನ್ನೊಪ್ಪಿಸಿ ತೆರಳುವುದು. ಮಂಗಳ.

**ಕವಿ ಪರಿಚಯ : (ಆಧಾರ: ಕರ್ನಾಟಕ ಕವಿಚರಿತ್ರೆ - ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**
ನಾರಾಯಣ ನಾಗಪ್ಪ ಜೋಷಿ (ಕ್ರಿ.ಶ. ೧೯೨೨-೧೯೯೦) ಇವರು ಶಿರಸಿ ಹತ್ತಿರದ ಸೋಂದಾದಲ್ಲಿ ಹುಟ್ಟಿದರು. ತಂದೆ ನಾಗಪ್ಪ ಜೋಷಿ, ತಾಯಿ ಪಾರ್ವತಿ, ಪತ್ನಿ ಲಕ್ಷ್ಮಿ. ಶಿಕ್ಷಕರಾಗಿ, ಸಾಹಿತಿಯಾಗಿ, ತಾಳಮದ್ದಲೆ ಅರ್ಥಧಾರಿಯಾಗಿ ಕೂಡಾ ಪ್ರಸಿದ್ಧರು.

ಇವರು ಬರೆದ ಪ್ರಸಂಗಗಳು: ಜಗಜ್ಜ್ಯೋತ, ದಾನಶೂರ ಕರ್ಣ, ಮಹಾಕ್ಷತ್ರಿಯ, ಯಾದವ ವಿನಾಶ, ಶಿವಾಜಿ ಚರಿತ್ರೆ, ಶುಂಭ ನಿಶುಂಭರ ಕಾಳಗ, ಹರಿಶ್ಚಂದ್ರ ಚರಿತ್ರೆ (ಸತ್ಯಹರಿಶ್ಚಂದ್ರ), ವೀರಪುತ್ರ ಅಭಿಮನ್ಯು, ರಕ್ತರಾತ್ರಿ, ಗದಾಯುದ್ಧ, ಮುದ್ದುಕಂದ

**ಟಿಪ್ಪಣಿ :**

ಪಾರಂಪರಿಕ ಪ್ರಸಂಗಗಳಲ್ಲಿ ಒಂದು.

# ಪ್ರಸಂಗ ಸಾಹಿತ್ಯ

**ಶಾರ್ದೂಲವಿಕ್ರೀಡಿತಂ**
ಶ್ರೀರಾಮಂ ಜನಕೋದ್ಭವಾಪತಿಮಜಂ ವೀರಾಗ್ರಗಣ್ಯಂ ಹರಿಂ
ಕ್ರೂರಾರಾತಿದಶಾಸ್ಯವಂಶದಹನಂ ಮಾರಾಕೃತಿಂ ಮಾಧವಂ |
ಧೀರಂ ಮಾರುತಿಸೇವ್ಯಮಾನಚರಣಂ ಸೂರಾನ್ವಯೋದ್ದೀಪಕಂ
ಸಾರಂ ಸತ್ಯಪರಾಕ್ರಮಂ ಶುಭಗುಣಂ ವೈರಾತಿಗಂ ವಂದಿಪೆಂ || 1 ||

**ವಾರ್ಧಕ**
ಧರಣಿಪ ಪರೀಕ್ಷಿತಂಗಮಲ ಮುನಿ ಶುಕಯೋಗಿ |
ಒರೆಯುತಿರೆ ಭಾಗವತ ವರಮಹಾಪೌರಾಣ |
ಚರಿತೆಯನು ಕೇಳಿ ತಲೆವಾಗಿ ನಮಿಸಲ್ಕಿತ್ತ ಕರುಣಿ ಕೇಳಿದನಾತಗೆ ||
ಅರಸ ಕೇಳ್ ಮೌನದಿಂದಿರುವ ಪರಿಗಳನೆನ್ನೊ |
ಳರುಹು ನಿನ್ನಯ ಮನದ ಪರಿಪರಿಯ ವ್ಯಸನಗಳ |
ಹರಿಸುವೆನು ಎನುತ ತೆಗೆದಪ್ಪುತಲಿ ತಕ್ಕೈಸೆ ಒರೆದನಾ ನೃಪತಿ ಮುನಿಗೆ || 2 ||

**ಸೌರಾಷ್ಟ್ರ - ತ್ರಿವುಡೆ**
ಕೇಳಿದೈ ಋಷಿತಿಲಕ ಸದ್ಗುಣ |
ಶೀಲನೆಂಬಭಿಧಾನ ಪೊಂದಿಹ |
ನೀಲವರ್ಣನ ಭಜಕಯೋಧ್ಯಾ | ಪಾಲನೆನಿಪ || 3 ||
ಸತ್ಯಹರಿಶ್ಚಂದ್ರಾಖ್ಯ ಭೂಪನ |
ಉತ್ತಮೋತ್ತಮ ಚರಿತವನು ನೀ |
ಬಿತ್ತರಿಪುದೆಂದೆನಲು ಕೇಳುತ | ಲತ್ತ ಮುನಿಪ || 4 ||
ಪೊಡವಿಪಾಲಕ ಕೇಳು ಮನದೊಳ |
ಗಿಡದೆ ಸಂಶಯವನ್ನು ನೀನಾ |
ಮೃಡಸಖನ ಭಜಕನ ಚರಿತ್ರವ | ಬಿಡದೆ ಮುದದಿ || 5 ||

**ಭಾಮಿನಿ**
ಧಾರಿಣೀಪತಿ ಲಾಲಿಸೀ ಪರಿ |
ಭೂರಿ ವೈಭವದಿಂದಯೋಧ್ಯಾ |
ಭೂರಮಣನಾಗಿಹ ಹರಿಶ್ಚಂದ್ರಾಖ್ಯ ನೃಪವರನು ||
ನಾರಿಯಾಗಿಹ ಚಂದ್ರಮತಿ ಸುಕು |
ಮಾರ ಗುರುಪರಿವಾರ ಸಹಿತಲಿ |
ವೀರನೊಡ್ಡೋಲಗದಿ ಮೆರೆಯುತಲಿರ್ದ ಸಭೆಯೊಳಗೆ || 6 ||

**ಕಂದ ಪದ್ಯ**
ಇಂಥಾ ಧರಣಿಪ ತನ್ನಯ |
ಮಂತ್ರಿಯ ಕರೆಸುತಲಾತನೊಳಾಲೋಚಿಸುತಂ ||
ಕಂತುಪಿತನ ಧ್ಯಾನಿಸುತಲಿ |
ಸಂತೋಷದೊಳಿಹರೆ ಪ್ರಜೆಗಳೆನುತಿಂತೆಂದಂ || 7 ||

**ಕಾಂಭೋಜಿ - ಝಂಪೆ**

ಮಂತ್ರಿ ಲಾಲಿಪುದು ಶ್ರೀ | ಕಾಂತನೊಲುಮೆಯೊಳೆಮ್ಮ |
ತಿಂಥಿಣಿಯು ಸತ್ಯವನು ಬಿಡದೆ ||
ಚಿಂತೆಗಳ ನೀಗಿಹರೆ | ಸಂತಸದಿ ಪೇಳು ನಿ |
ನ್ನಂತರದೊಳನುಮಾನವಿಡದೆ || 8 ||
ಬಡವರನು ಪೋಷಿಸುತ | ಧಡಿಗರನು ಶಿಕ್ಷಿಸುತ |
ಕಡುಧರ್ಮಪರವಾಗುತಿಂದು ||
ಜಡಜನಾಭನ ಪಾದ | ಯೆಡೆಬಿಡದೆ ಸೇವಿಪರ |
ನಡತೆಯನು ಎನಗೆ ಪೇಳಿಂದು || 9 ||
ಪತಿವ್ರತಾಧರ್ಮದೊಳು | ಅತಿ ಪ್ರೇಮವಿರಿಸಿರ್ಪ |
ಸತಿಯರಿರುವರೆ ನಮ್ಮ ಪುರದಿ ||
ಕೃತು ವೇದ ಪೌರಾಣ | ಸಕಲ ಶಾಸ್ತ್ರಗಳನರಿ |
ತತುಳ ದ್ವಿಜಸಮುದಾಯವಿಹುದೆ || 10 ||

**ಕಂದ ಪದ್ಯ**

ಈ ತೆರದಿಂದಲಿ ಭೂಪಂ |
ಪ್ರೀತಿಯೊಳಾ ಸಚಿವನೊಳತಿ ದಯದಿಂ ಕೇಳಲ್ ||
ತಾ ತಳುವದೆ ಮುಂತ್ರಿಯು ತಾ |
ನೀ ತೆರದೊಳ್ ನೃಪನೊಡನತಿಭಕ್ತಿಯೊಳೆಂದಂ || 11 ||

**ಸೌರಾಷ್ಟ್ರ - ಅಷ್ಟ**

ಕೊರತೆಯಿಲ್ಲವು ನಮ್ಮ | ವರ ಪ್ರಜಾವರ್ಗಕ್ಕೆ | ಭೂಪ ಕೇಳು || ಅವ |
ಧರಿಸು ಸತ್ಯವ ಬಿಡದಿರುವರು ಸತತದಿ | ಭೂಪ ಕೇಳು || 12 ||
ಎಲ್ಲಿ ನೋಡಲು ಧರ್ಮ | ವೆಲ್ಲರಿತಿರುವರು | ಭೂಪ ಕೇಳು || ಮತ್ತೆ |
ಫುಲ್ಲನಾಭನ ಭಕ್ತರೆಲ್ಲರಾಗಿರುವರು | ಭೂಪ ಕೇಳು ||13 ||
ದಾರಿದ್ರ್ಯ ದುಃಖ ಕೈ | ಸೇರದು ಜನರಿಗೆ | ಭೂಪ ಕೇಳು || ಚೆಲ್ವ |
ನೀರೆಯರ್ ಪತಿಭಕುತಿಯ ಮೀರದಿರುವರು | ಭೂಪ ಕೇಳು || 14 ||
ಬುಧಜನಗಳು ತಮ್ಮ | ಸದಮಲ ಭಕ್ತಿಯೊಳ್ | ಭೂಪ ಕೇಳು || ಸಿರಿ |
ಪದುಮನಾಭನ ದಿವ್ಯ ಪದಗಳ ಮರೆಯರು | ಭೂಪ ಕೇಳು || 15 ||

**ಭಾಮಿನಿ**

ಸಚಿವನೀ ತೆರದಿಂದ ಪೇಳಿದ |
ವಚನವಾಲಿಸಿ ನೃಪತಿ ತನ್ನಯ |
ನಿಚಯವನು ಬೀಳ್ಗೊಂಡು ಸಂತಸದಿಂದಲಿರುತಿರಲು ||
ಶಚಿಪತಿಯು ಸುರಪುರದಿ ಸಭೆಯನು |
ರಚಿಸಿ ವೈಭವದಿಂದ ಹರುಷದಿ |
ಅಚಲದಧಿಪಾಲಕರ ನೆರವಿಯ ಬರವನೀಕ್ಷಿಸಿದ || 16 ||

**ವಾರ್ಧಕ**

ತರಣಿಜಂ ಗಂಧವಹ ಸಪ್ತಾರ್ಚಿಯೀಶಾನ |
ನಿಋತಿ ವರುಣ ಕುಬೇರ ವಾಸಿಷ್ಠ ಕುಶಿಕವರ |
ತರಳ ವಿಶ್ವಾಮಿತ್ರ ದೇವಗುರು ನಾರದಂ ಚ್ಯವನ ವಲ್ಕಲಿ ಗಾಲವ ||
ಪರಮ ಧಾರ್ಮಿಕ ಭೃಗು ಪರಾಶರಂ ದುರ್ವಾಸ |
ಕರುಣಿ ಭಾರದ್ವಾಜ ಕಣ್ವ ಮುನಿ ಗೌತಮಂ |
ಸುರಪತಿಯ ಸಭೆಗೆಲ್ಲ ಬರೆ ಕಂಡು ನಾಕೇಶನುಪಚರಿಸಿ ಕುಳ್ಳಿರಿಸಿದ || 17 ||

**ನೀಲಾಂಬರಿ - ಝಂಪೆ**

ಇಂತು ನೆರೆದಿಹ ಜನರ | ತಿಂಥಿಣಿಯ ನೋಡಿ ಸುರ |
ಕಾಂತನೆಂದನು ಮನದಿ | ಸಂತೋಷಗೊಳುತ || 18 ||
ಧಾತ್ರಿಯೊಳು ಧರೆಯಾಳ್ವ | ಪೃಥ್ವಿಪಾಲರೊಳಧಿಕ |
ಸತ್ಯವಂತರದಾರೆಂ | ದುತ್ತರವ ಪೇಳಿ || 19 ||
ಏಕವಚನದಿ ದಿನವ | ನೂಕುವವರ್ಯಾರಿಹರು |
ಏಕಪತ್ನಿಯ ವ್ರತವ | ಸಾಕುವವರಿಹರೆ || 20 ||
ದಾನಧರ್ಮಾದಿಗಳ | ನ್ಯೂನವಿಲ್ಲದೆ ಮಾಳ್ಪ |
ಮಾನವಾಧಿಪರ್ಯಾರು | ಕ್ಷೋಣಿಯೊಳಗೀಗ || 21 ||
ಎಂದುದನು ಕೇಳ್ದು ತಾ | ನಿಂದಿರಾಧವಸುತನ |
ಕಂದ ಪುರುಹೂತನಿಗೆ | ಎಂದನೀ ಮಾತ || 22 ||

**ಕೇದಾರಗೌಳ - ಅಷ್ಟ**

ಸುರಪಾಲ ಕೇಳಯ್ಯ | ಧರೆಯಾಳ್ವ ಭೂಪರೊಳ್ |
ತರಣಿಕುಲದ ತ್ರಿಶಂಕು ||
ತರಳ ಹರಿಶ್ಚಂದ್ರ | ಭೂಪನು ಧುರಧೀರ |
ಪರಮಸಾಹಸವಂತನು || 23 ||
ನೀತಿವಂತನು ಬಹು | ಖ್ಯಾತನು ಸಜ್ಜನ |
ವ್ರಾತನು ಗುಣಯುತನು ||
ದಾತನು ಭವಭಯ | ಭೀತನು ರಾಜರ |
ನಾಥನು ಬಲ್ಲಿದನು || 24 ||
ಆಡಿದ ಮಾತನು | ಬಿಡಲಾರ ಸರ್ವಥ |
ನೋಡನು ಪರಸ್ತ್ರೀಯರ ||
ರೂಢಿಪಾಲನೆಯ ತಾ | ನಧಿಕ ಬಲ್ಲಿದನಾಗಿ |
ಮಾಡುವನಾ ನೃಪನು || 25 ||

**ಕಂದ ಪದ್ಯ**

ಎಂದಾ ಮುನಿಪನ ವಚನವ |
ನಂದಾಲಿಸಿ ಕೋಪದಿಂದ ವಿಶ್ವಾಮಿತ್ರಂ ||
ಚಂದಿರಮೌಳಿಯೆನುವ ತೆರ |
ದಿಂದಂ ಗರ್ಜಿಸುತಾ ಮುನಿಯೊಡನಿಂತೆಂದಂ || 26 ||

**ಮಾರವಿ - ಏಕ**

ಏನೆಂದೆಯೊ ವಿಧಿ | ಸೂನು ವಸಿಷ್ಠನೆ |
ಕ್ಷೋಣಿಯೊಳ್ ಹರಿಶ್ಚಂದ್ರ ||
ತಾನೆ ಕೋವಿದ ಸತ್ಯ | ಧೀನನೆನುತ ಬಹು |
ಮಾನಿಸಿ ನುಡಿದೆಯಲ್ಲೈ || 27 ||
ನಿನ್ನವನೆನ್ನುತ | ಬಣ್ಣಿಸಿ ಘನತರ |
ಮನ್ನಣೆಯಿತ್ತರೆಯು ||
ಕಣ್ಣಿಲ್ಲವೆ ನಾವ್ | ನೋಡದಿರುವೆವೇ |
ಬಣ್ಣಿಸಬೇಡವನ || 28 ||
ವೃತ್ರಾರಿಯೆ ನೀ | ಸತ್ಯವಿದೆನುತಲಿ |
ಚಿತ್ತಕೆ ತಾರದಿರು ||
ವ್ಯರ್ಥದಿ ಬಗುಳುವ | ನೆನೆ ಕೇಳ್ದ ಶತ |
ಪತ್ರಜಸುತನೆಂದ || 29 ||

**ಶಂಕರಾಭರಣ - ಅಷ್ಟ**

ಧಾತ್ರಿಯಾಳ್ವ ಹರಿಶ್ಚಂದ್ರನು |
ಸತ್ಯವಂತನಲ್ಲವೆಂದು |
ವ್ಯರ್ಥ ಬಗುಳಬೇಡ ವಿಶ್ವಾ | ಮಿತ್ರ ಮುನಿರಾಯ || 30 ||
ಬಗುಳಗಿಗುಳಾ ಬೇಡವೆಂಬೆ |
ಬಗುಳುವದ್ಯಾರೀಗ ಪೇಳು |
ಜಗದೊಳಗಾ ಹರಿಶ್ಚಂದ್ರನು | ಸುಗುಣನೆನುತಲಿ || 31 ||
ಜಾರೆಯು ಕುಲಸ್ತ್ರೀಯ ಕಂಡು |
ಜಾರೆಯೆಂದು ಪೇಳ್ವಳಂತೆ |
ಚಾರು ನಿನ್ನ ಮನಸು ಕೆಟ್ಟ | ನಾರಿಯರಂತೆ || 32 ||
ಕುರುಬರಾದ ಹಳ್ಳಿಯರಿಗೆ |
ಹರಳು ಮಾಣಿಕವೆಂದೆಂಬ |
ತೆರದೊಳಾಯ್ತು ನಿನ್ನ ಮನಸು | ವರವಸಿಷ್ಠನೆ || 33 ||
ಕುಲಕೆ ತಕ್ಕ ಮಾತನೆಂದೆ |
ಇಳೆಯಪಾಲನಿಂಗೆ ಜನಿಸಿ |
ಒಲಿಸಿಕೊಂಡೆ ಋಷಿಯಾಶ್ರಮವ | ತೊಲಗಿ ಪೋಗೆಲಾ || 34 ||
ಎನ್ನ ಕುಲವನೆಣಿಸದಿರು |
ನಿನ್ನುವನೆಲ್ಲವ ಬಲ್ಲೆ |
ಕನ್ನೆಯೂರ್ವಶಿಯ ಕುವರ | ನೆನ್ನುವರ್ ಯಾರ || 35 ||

**ಭಾಮಿನಿ**

ಎಂದುದನು ಕೇಳುತ ವಸಿಷ್ಠಮು |
ನೀಂದ್ರನೆಂದನು ಬಾಯೊಳಿನಿತದ |
ನಿಂದು ಪೇಳಲು ಕೇಳಿ ಹರಿಶ್ಚಂದ್ರಾಖ್ಯ ಭೂವರನು ||
ಸಂದ ರಾಯರೊಳಧಿಕ ದ್ವಿಜಕುಲ |
ವೃಂದಪೋಷಿತ ಸತ್ಯನಿಧಿ ವರ |
ಸಿಂಧುಶಯನನ ಭಜಕನೆನೆ ಕೇಳುತ್ತ ಮುನಿ ನುಡಿದ || 36 ||

**ಕೇದಾರಗೌಳ – ಝಂಪೆ**

ಧರೆಯಾಳ್ವ ಹರಿಶ್ಚಂದ್ರನು | ನೀನೀಗ |
ಒರೆದಂತೆ ಇರಲು ನಾನು ||
ಶಿರದಿ ಸುರೆಯನು ಧರಿಸುತ | ದಕ್ಷಿಣಕೆ |
ತೆರಳುವೆನು ಕೇಳು ಮತ್ತಾ || 37 ||
ಹಲಗಾಲ ನಾ ಗೈದಿಹ | ತಪಫಲವ |
ಇಳೆಯರಸಗಿತ್ತು ಸಹ ||
ತಳುವದೈದುವೆ ನಾನೆಲೆ | ಎಂದೆನುತ |
ಛಲದಿ ಪೇಳಿದನಾಗಲೆ || 38 ||
ನೀ ಪೇಳಿದಂತೆ ನೃಪನು | ಇರದಿರಲು |
ನಾ ಪೇಳಿದಂತೆ ನೀನು ||
ಲೋಪಗೊಳ್ಳದೆ ಸುರೆಯನು | ಧರಿಸುತ್ತ |
ಪೋಪುದೈ ಕಡೆಗೆಂದನು || 39 ||
ಎಂದುದಕೆ ಸನುಮತಿಸಲು | ಸುರಪಾಲ |
ನೆಂದ ಸರ್ವರೊಳಾಗಲು ||
ಚಂದದಲಿ ಪೋಗಿರೆನುತ | ಕಳುಹಿಸಲು |
ಬಂದರಾ ಮನೆಗೆ ನಗುತ || 40||

**ಸಾಂಗತ್ಯ - ರೂಪಕ**

ಸುರಪನ ಸಭೆಯಿಂದ ಪೊರಟೈದೆ ಮುನಿಗಳು |
ತೆರಳಲು ತಂತಮ್ಮಾಲಯಕೆ ||
ಪರಮ ಕೌಶಿಕಮುನಿ ಮನದೊಳಾಲೋಚಿಸಿ |
ಒರೆದನು ತನ್ನಯ ಪರಿಯ || 41 ||
ಪೊಡವೀಶಗೆರಡ ನಾ ಯೋಚಿಪ ಬಗೆಗೀಗ |
ಕಡು ಯತ್ನವನು ಮಾಳ್ಪೆನೆನುತ ||
ತಡೆಯದೊಂದನು ತಿಳಿದೊಡನೆ ಕಮಂಡಲ |
ಜಡವ ಪ್ರೋಕ್ಷಿಸಿದನು ಧರೆಗೆ || 42 ||
ತಳಿಯಲುದಕವನ್ನು ಕಪಟ ತಾಪಸರಾಗ |
ತಳುವದೆ ಕಂಗೊಳಿಸುತಲೆ ||
ನಿಲಬೇಡಿ ಬೇಗದಿ ಪೋಗಿ ಸಾಕೇತ ಭೂ |
ವಳಯವ ಸಾರ್ದು ವಿನಯದಿ || 43 ||

ಮೇದಿನೀಶನ ಕಂಡು ಜಾಂಬೂನದಧ್ವರ |
ಮೋದದಿಂ ಮಾಡಿಸೆಂದರುಹೆ ||
ಭೇದವನರಿಯದೆ ನಡೆಸುವನೆನೆ ಕೇಳ್ದಾ |
ಯೋಧ್ಯಾಕೈದಿಯೆ ಬಂದರವರು || 44 ||
ಪೃಥ್ವಿಪಾಲಕನನ್ನು ಕಾಣುತ್ತ ಕೃತುವಿನ |
ವರ್ತಮಾನವ ಪೇಳೆ ಭೂಪ ||
ಚಿತ್ತದಿ ಸಂಶಯಗೊಳ್ಳದೆ ಕೈಕೊಂಡ |
ಮತ್ತೆ ಸುವರ್ಣಯಾಗವನು || 45 ||

**ಭಾಮಿನಿ**

ಧರಣಿಪತಿ ಕೇಳ್ ಬಳಿಕ ಭೂಪನು |
ಸುರುಚಿರದ ಕ್ರತುವೆಸಗಿ ವಿಪ್ರರಿ |
ಗಿರದೆ ದಕ್ಷಿಣೆ ದಾನಧರ್ಮದಿ ತೃಪ್ತಿಯನು ಗೊಳಿಸಿ ||
ಹರುಷದಿಂದಲಿ ಇರಲಯೋಧ್ಯೆಗೆ |
ಪರಮಋುಷಿ ಕೌಶಿಕನು ಬರುವುದ |
ಧರಣಿಪತಿ ಕಾಣುತ್ತಲೆದ್ದನು ಇದಿರುಗೊಳಲೆನುತ || 46 ||

**ಬೇಗಡೆ - ಅಷ್ಟ**

ಬಂದ ಕೌಶಿಕನೆಡೆಗೆ ರಾಷ್ಟ್ರದ |
ಮಂದಿಯನು ಕೊಂಡೊಯ್ದು ತಾ ಕರೆ |
ತಂದು ವಿಷ್ಟರವಿತ್ತು ಪೂಜಿಸಿ ||
ಬಂದಿರೆಲ್ಲಿಂದಿತ್ತ ತವ ಪದ |
ದ್ವಂದ್ವವನು ನಾ ಕಂಡ ಕಾರಣ |
ಹಿಂದೆ ಮಾಡಿದೆನೀಗ ಭವಗಳ || 47 ||
ಸದಮಲರು ನೀವ್ ಯಜ್ಞಕಾಲದೊ |
ಳೊದಗಿ ಬಂದುದರಿಂದಯೆನ್ನ |
ಭ್ಯುದಯವಾಯ್ತಿನ್ನೇನ ಪೇಳಲಿ ||
ಮುದದೊಳಪ್ಪಣೆಯಿತ್ತರೇನದ |
ನೊದಗಿಸಿಯೆ ತಾ ಕೊಡುವೆನೆಂದೆನ |
ಲದಕೆ ಮುನಿವರ ಪೇಳ್ದನವನೊಳು || 48 ||
ರನ್ನಭೂವರ ಪಟ್ಟದಾನೆಯ |
ಬೆನ್ನನೇರಿಯೆ ಕವಡೆ ಹಾರಿಸೆ |
ತನ್ನಿಂತಾನೇ ಹಾರುವುನ್ನತವು ||
ಹೊನ್ನರಾಶಿಯ ಕೊಡುವುದೆಂದೆನೆ |
ಖಿನ್ನನಾಗದೆ ಭೂಪನನಿತರೊಳ್ |
ಮನ್ನಿಸಿದ ತಾನಿತ್ತು ಮುದದಲಿ || 49 ||

**ವಾರ್ಧಕ**

ಪೃಥಿವಿಪತಿಕುಲಜಾತ ಲಾಲಿಸೈ ಕಥನಮಂ |
ಯತಿವರ್ಯ ಕಾಣುತ್ತ ಕ್ಷಿತಿಪತಿಯೊಳಿಂತೆಂದ |
ಮತಿಯುತನೆ ನೀನಿತ್ತ ಧನ ನಿನ್ನೊಳಿರಲೀಗಲೆನ್ನದಾಗುತಮಿಲ್ಲಿಯೆ ||
ಕೃತಕಮೆಳ್ಳಿನಿತಿಲ್ಲ ಬಹೆನೆನುತ ಪೊರಮಟ್ಟು |
ಪಥದಿ ಬರುತಿರೆ ಮನದಿ ಯೋಚಿಸುತ ಬಹುವಿಧದಿ |
ಪೃಥಿವಿಪನ ಸೋಲಿಪೆಂ ಬಳಿಕಿನ್ನು ಮೃಗವ ನಿರ್ಮಿಸುತಾಗ ಕಳುಹಿಸಿದನು || 50 ||

**ಕಂದ ಪದ್ಯ**

ಬಂದಾ ಕಪಟದ ಮೃಗಕುಲ |
ವೃಂದವು ಭೂಪನ ವನಮಂ ಪೊಕ್ಕತಿ ರಭಸದಿ ||
ಒಂದುಳಿಯದೆ ಕೆಡಿಸಲು ಚರ |
ರಂದೈದಿಯೆ ಬಂದು ಪೇಳ್ವರಾ ಭೂಮಿಪಗಂ || 51 ||

**ಮುಖಾರಿ - ಏಕ**

ಪರಾಕು ಜೀಯಾ ಬಿನ್ನಪವ | ವಿನಯದಿ |
ಪಾಲಿಸೆಮ್ಮರಿಕೆಯನೊಂದ || ಪರಾಕು || ಪ ||
ಹೊರಗಿನ ವರ ಉದ್ಯಾನದೊಳಗೆ |
ಪರಿ ಪರಿ ಕಾಡ್ ಮೃಗ ತಿರುಗುತ ಕಡೆಗೆ ||
ಮರುಗ ನೇರಳೆ ಬಾಳೆಗಿಡವ | ಹಾನಿಯ ಗೈದು |
ಮೆರೆವುತಿರ್ಪವು ಕೇಳು ಜೀಯ || 52 ||
ನರಿಯು ಹರಿಯು ಕರಿವೆರಳೆಗಳೆಲ್ಲ |
ಕರಡಿ ಕಾಡೆಮ್ಮೆಯು ವರಮೃಗವೆಲ್ಲ ||
ತೆರಳದು ನಮ್ಮ ನೋಡಿದರೆ | ಬೆದರವವು |
ತೆರಳಯ್ಯ ಮೃಗ ನಿನಗಿದಿರೆ || 53 ||
ಶುಕ ಬಕ ಹಂಸ ಕೋಗಿಲೆ ಹಿಂಡು |
ಪ್ರಕಟವಾಗಿರುತಿಹ ವಾಯಸದಂಡು ||
ಸಕಲ ವೃಕ್ಷದೊಳಿಹ ಫಲವ | ತಿನ್ನುತ ತಾವೆ |
ಸುಖದೊಳಿರ್ಪವು ಕೇಳು ನಿಜವ || 54 ||
ಮಂದಾರ ಪಾದರಿ ಪಾರಿಜಾತಗಳು |
ಕುಂದಣ ಕ್ಯಾದಿಗೆ ನಿಕರಗಳು ||
ಹೊಂದಿಸಿದವು ನೆಲಕೆಲ್ಲ | ಮಹಾರಾಜ ದೊರೆಯೆ |
ಬಂದು ಕಾಂಬುದು ನೀವಿದನೆಲ್ಲ || 55 ||
ಜಂಬು ಜಂಬೀರ ಕ್ರಮುಕ ದಾಡಿಂಬ |
ಲಿಂಬೆಯು ಕಿತ್ತಳೆ ದ್ರಾಕ್ಷೆಯ ಕದಂಬ ||
ತುಂಬಿಕೊಂಡಿಹ ಮರಗಿಡವ |
ಕೆಡಿಸಿದ ಪರಿಯ | ನೆಂಬುವದೇನು ಮಹಾರಾಯ || 56 ||

**ಮಾರವಿ - ಝಂಪೆ**

ವನಪಾಲನೆಂದ ನುಡಿ ಲಾಲಿಸುತ ಭೂವರನು |
ಘನ ಕಿನಿಸ ತಾಳಿ ಮಂತ್ರಿಯನು ||
ವಿನಯದಿಂ ಕರೆದೆಂದ ಬರಿಸೈ ಪುಳಿಂದಕರ |
ವನದಿ ಮೃಗಬೇಟೆಗಿಂದಿನಲಿ || 57 ||
ದುಷ್ಟಮೃಗಕುಲವೈದಿ ಬೆಳೆದಿರುವ ನಮ್ಮಯ ವಿ |
ಶಿಷ್ಟವನವನು ಕೆಡಿಸಿತಂತೆ ||
ಕಷ್ಟವಿದು ಪೇಳ್ವುದಿನ್ನೇನ ನಾ ನಿನ್ನೊಡನೆ |
ತಟ್ಟನೈತಹುದು ಸನ್ನಹದಿ || 58 ||
ದೊರೆರಾಯ ಸಕಲ ಸನ್ನಹವು ಒದಗಿದೆ ಬೇಗ |
ತೆರಳ್ವುದೆಂದೆನೆ ಕೇಳಿ ಭೂಪ ||
ಹರುಷದಿಂ ಖಡ್ಗವ ಕಠಾರಿ ಬರ್ಚಿಗಳನ್ನು |
ಧರಿಸಿ ಮೃಗಬೇಟೆಗೈತಂದ || 59 ||

**ಮುಖಾರಿ - ಏಕ**

ಬೇಟೆಗೆನ್ನುತ ಬಂದ ಭೂಪ | ಕಾನನಕಾಗಿ |
ಬೇಟೆಗೆನ್ನುತ ಬಂದ ಭೂಪ || ಪ ||
ಸೊಕ್ಕಿದ ಕರಿಯನು | ಸಿಕ್ಕಿಸಿ ಕುಣಿಯೊಳು |
ಸಿಕ್ಕಿದ ಮೃಗವ ಹಿಂ | ದಿಕ್ಕಿಸಿಕೊಳುತ || ಬೇಟೆ || 60 ||
ಹಿಂಡು ಮೃಗಂಗಳ | ದಿಂಡುದರಿದು ಕಡಿ |
ಕೆಂಡವ ಕಾರುತ | ಮಂಡಲಾಧಿಪನು || ಬೇಟೆ || 61 ||
ಕಾರಿಸಿ ರಕ್ತವ | ಚೀರಿಸಿ ಬಲು ಮದ |
ವೇರಿಸಿ ಮೃಗವನು | ತೂರುತ ಬಾಣದಿ || ಬೇಟೆ || 62 ||

**ಭಾಮಿನಿ**

ದಂತಿಪುರವರ ಕೇಳು ಮೃಗಕುಲ |
ಸಂತತಿಯ ಬರಿಗೈದು ಭೂಮಿಪ |
ಸಂತಸದಿ ವ್ಯಾಧರನು ಮನ್ನಿಸಿ ಹರುಷದಿಂದಿರ್ದ ||
ಮಂತ್ರಿಸಹಿತಲೆ ಮುಂದೆ ಬಹಳ ವ |
ನಾಂತರವ ಸಂಚರಿಸಿ ಬಳಲಿಯೆ |
ನಿಂತು ನೋಡಿದನೊಂದು ಋಷಿಯಾಶ್ರಮವ ಭೂವರನು || 63 ||

**ವಾರ್ಧಕ**

ಫಲಭರಿತಮಾಗಿರ್ಪ ಸಾರದಿಂ ನೇರದಿಂ |
ಕಲರವವ ಗೆಯ್ಯುತಿಹ ಕೀರದಿಂ ತೋರದಿಂ |
ಬೆಳೆದಿರ್ದ ಪಕ್ವ ರಸದಾಳಿಯಿಂ ಬಾಳೆಯಿಂದಾ ವನದ ನಟ್ಟ ನಡುವೆ ||
ಕುಳಿತುಕೊಂಡಿರುವ ಮುನಿಜಾಲದಿಂ ಮೇಳದಿಂ |
ಹಲವು ತರದಿಂ ಗೈವ ಹೋಮದಿಂ ನೇಮದಿಂ |
ದಿಳೆಗೆ ನೂತನವಾದ ಮಂತ್ರದಿಂ ತಂತ್ರದಿಂ ಮೆರೆವುತಿರ್ದುದ ಕಂಡನು || 64 ||

**ಮಾರವಿ - ಏಕ**

ಕಂಡಾ ವನಮಂ ಪೊಕ್ಕನು ಭೂಮಿಪ |
ಕೊಂಡಾಡುತ ಮುದದಿ ||
ರುಂಡಮಾಲನ ಪೋಲ್ವ ಯಮಿಗಳ ಪದದ್ವಯ |
ಪುಂಡರೀಕಕೆ ಮಣಿದು || 65 ||
ಕೇಳಿದ ಬಳಿಕವ ನೀವ್ಯಾರೆಂಬುದ |
ಪೇಳಿರಿ ಮನವೊಲಿದು ||
ತಾಳದೆ ಕ್ರೋಧವನೆಂದೆನೆ ಮುನಿಕುಲ |
ಪಾಲಕನುಸಿರಿದನು || 66 ||
ತಾನು ಪರಾಶರ ಮುನಿಪನು ಕೇಳೈ |
ಸೂನು ವಸಿಷ್ಠನಿಗೆ ||
ನೀನ್ಯಾರೆಂಬುದ ತಿಳುಹೆನೆ ಕೇಳಿ ನಿ |
ಧಾನದೊಳವನೆಂದ || 67 ||
ಸರಸಿಜಮಿತ್ರನ ಕುಲಜ ಹರಿಶ್ಚಂದ್ರ |
ಧರಣಿಪನಿದು ದಿಟವು ||
ಗುರುಗಳ್ ವಸಿಷ್ಠರ ತರಳರೆ ಧಣಿಧಣಿ |
ಗುರುಗಳು ನೀವೆನಗೆ || 68 ||

**ಕೇದಾರಗೌಳ - ಅಷ್ಟ**

ಭೂಮಿಪನೆಂದುದ ಕೇಳುತ ಮುನಿಕುಲ |
ಸೋಮನು ನಸುನಗುತ ||
ಏ ಮಹರಾಯನೆ ನೀನಿತ್ತ ಬಂದುದ |
ಪ್ರೇಮದಿಂದುಸಿರೆನಲು || 69 ||
ವನಬೇಟೆಗೈದಿ ಬಂದವನಿತ್ತ ಬಂದೆನು |
ಮುನಿಲಲಾಮನೆ ಕೇಳಯ್ಯ ||
ಘನವಾದ ತವಪದವನಜವ ಕಂಡೆನು |
ಹನನಗೈದೆನು ಪಾಪವ || 70 ||
ಎಂದುದ ಕೇಳ್ದು ವಸಿಷ್ಠನ ತನಯ ತಾ |
ನೆಂದನು ಭೂವರಗೆ ||
ಚಂದವಾಯ್ತಿತ್ತಲು ಬಂದುದು ಮನಕಾ |
ನಂದವಾದುದು ಮಗನೆ || 71 ||
ಆದರೆ ಪೇಳ್ವೆನು ಗಾಧಿಪುತ್ರನ ವನ |
ಕೈದ ಬೇಡಯ್ಯ ನೀನು ||
ಭೇದವಿಟ್ಟಿಹ ತನ್ನ ಮನದಲ್ಲಿ ನೀ ಬೇರೆ |
ಹಾದಿ ಹಿಡಿದು ಹೋಗೆಂದ || 72 ||

**ಭಾಮಿನಿ**

ಗುರುವರನ ಸುತನೆಂದ ಮಾತನು |
ಧರಣಿಪತಿ ಕೇಳುತ್ತ ಹರುಷದಿ |
ಎರಗಿ ತಾ ಬೀಳ್ಕೊಂಡು ನಡೆದನು ಮಂತ್ರಿಸಹಿತಾಗಿ ||
ಹರಿಯ ಸ್ಮರಿಸುತ ಮುಂದೆ ಬರುತಿರೆ |
ವರ ಮಹಾ ಪ್ರಾರಬ್ಧಕರ್ಮದೊ |
ಳಿರದೆ ಗೋಚರವಾಯ್ತು ಸಿದ್ಧಾಶ್ರಮವು ಭೂವರಗೆ || 73 ||

**ಸೌರಾಷ್ಟ್ರ - ತ್ರಿವುಡೆ**

ಧಾರಿಣೀಶನು ಕಾಣುತೀ ವನ |
ದಾರದೆಂದೆನುತಾಗ ಯೋಚಿಸಿ |
ಘೋರನೇ ತಿಳಿದೆಂದ ಮನದೊಳು | ದಾರಬಲನು || 74 ||
ಕುಶಿಕಸುತನಾಶ್ರಮ ಹೊಗದಿರೆಂ |
ದುಸಿರಿದನು ಗುರುಸುತನು ನಾನೀ |
ವಿಷಮ ವನಕಿನ್ನೇಕೆ ಬಂದೆನು | ಸಸಿನದಿಂದ || 75 ||
ಪೊಗದಿರಲು ಈ ವನವ ಮುನಿಪನು |
ಬಗೆವನೇನೋ ಮನಸಿನಲಿ ತಾ |
ಹಗರಣವು ಬಂದೊದಗಿತೆನ್ನಯ | ಮುಗುದತನದಿ || 76 ||
ಸಾರಿದರೆ ಈ ವನವ ಗುರುಸುತ |
ಮೀರಿದನು ತದ್ವಚನವೆನುವನೊ |
ಕಾರಿಯವು ನೆರೆ ಕೆಟ್ಟಿತೆಂದನು | ಧಾರಿಣೀಶ || 77 ||

**ಭಾಮಿನಿ**

ರಾಯನೀ ಪರಿ ಮನದಿ ಚಿಂತಿಸಿ |
ನೋಯುತಿರೆ ಮಂತ್ರೀಶ ನುಡಿದನು |
ಆಯ ಬೇರಿನ್ನಿಲ್ಲ ಮುನಿಪನ ಕಂಡು ಮಾತಾಡಿ ||
ಕಾಯಬೇಕೆಂದೆನಲು ಋಷಿಕುಲ |
ರಾಯ ಭೇದವನೆಣಿಸನಲ್ಲಿದು |
ನ್ಯಾಯವೆಂದೆನುತಿರಲು ಕುಶಿಕಜ ತಿಳಿದ ನೃಪಬರವ || 78 ||

**ಭೈರವಿ - ಅಷ್ಟ**

ಬಂದನೇ | ನೃಪ | ಬಂದನೇ || ಪ ||
ಬಂದನೆ ನಮ್ಮಯ ವಿಪಿನಕ್ಕೆ ನೃಪನು |
ಚಂದದಿ ತೀರಿಸುವೆನು ಸಂಕಲ್ಪವನು || ಅ ||
ಸತ್ಯವಿಲ್ಲೆನಿಸಿ ಅಸತ್ಯ ಪೇಳಿಸುವೆ |
ಸತ್ಯಾತ್ಮನಲ್ಲವೆಂಬುದನು ತೋರಿಸುವೆ ||
ಕೃತ್ಯವಿದೆಲ್ಲವ ನೋಡಿರೆಂದೆನುತಾ |
ಪೃಥ್ವಿಯನೊದೆದನು ಮನದಿ ಕೋಪಿಸುತ || 79 ||

ಒದ್ದಬ್ಬರಕೆ ಭೂಮಿಯೊಡೆದು ಈರುವರು |
ಎದ್ದು ಬಂದರು ಚಂಡಾಲಬಾಲೆಯರು ||
ಹೊದ್ದುತ ಮುನಿಪನ ಪಾದವ ಕಂಡು |
ಬಿದ್ದು ತಾವೆಂದರು ತೋಷವಗೊಂಡು || 80 ||

**ಪಂಚಾಗತಿ - ಮಟ್ಟೆ**

ಮುನಿಲಲಾಮನೆ | ಯೆಮ್ಮನಿಂದಿಲಿ |
ಜನನ ಗೈದುದು | ಪೇಳು ಮುದದಲಿ ||
ವಿನಯದಿಂದಲಿ | ಪೇಳ್ದ ಕಾರ್ಯವ |
ಕ್ಷಣದಿ ಮಾಳ್ಪೆವು | ನೋಡು ಶೌರ್ಯವ || 81 ||
ಎಂದ ಮಾತನು | ಕೇಳ್ದು ಕುಶಿಕಜ |
ನೆಂದನವರೊಳು | ಮನದೊಳಿಹ ನಿಜ ||
ಬಂದಿಹನಿಲ್ಲಿ | ಗೋರ್ವ ಭೂಪನು |
ಕುಂದಿಕೊಳ್ಳದೆ | ಪೋಗುತವನನು || 82 ||
ಮನವ ಮೋಹಿಸಿ | ವಿನಯದಿಂದಲಿ |
ಜನಪನಿಂಗಿಹ | ಛತ್ರ ತಹುದಿಲ್ಲಿ ||
ಕ್ಷಣದೊಳಿದಕವ | ನೊಪ್ಪದಿದ್ದರೆ |
ವನಿತೆಯಾಗಿರು | ವಂತೆ ಪೇಳಿರಿ || 83 ||

**ಭಾಮಿನಿ**

ವಸುಮತೀಪತಿ ಕೇಳು ಈ ಪರಿ |
ಋಷಿಕುಲಾರ್ಯನು ಬೆಸಸೆ ಕಾಣುತ |
ವಿಷಮಮುಖಿಯರು ಬಂದರಾ ಭೂಮಿಪನ ಹೊರೆಗಾಗಿ ||
ಸಸಿನದೊಳಗಭಿನಯವ ತೋರಿಸಿ |
ಯೆಸೆವ ನಾಟ್ಯವನಾಡುತಿರ್ದರು |
ಬಿಸಜಸಂಭವಸೃಷ್ಟಿಯೊಳಗತಿ ಚಿತ್ರತರವೆನಿಸಿ || 84 ||

**ಕಾಂಭೋಜಿ - ಏಕ**

ಆಡಿದರಾಡಿದರು | ಬಾಲೆಯರು | ಆಡಿದರಾಡಿದರು || ಪ ||
ಸರಿಗಮಪದನಿಸೆಂದು | ಸರಿಯಾಗಿ | ಶರೀರದ ಪಾಪವೆಂದು ||
ಧಿರಿನ ಧಿರಿನವೆಂದು | ಸ್ತ್ರೀಯರು | ತರಿಕಿಟ ತರಿಯೆಂದು || ಆಡಿ || 85 ||
ಝಣ ಝಣ ಝಣವೆಂದು | ಕಡಗ ಗೆಜ್ಜೆ | ಕಿಣಿ ಕಿಣಿ ಕಿಣಿಯೆಂದು ||
ಕಣುಗಳ ತಿರುಹಿಸುತ | ಎಲ್ಲರ | ಮನವನು ಮೋಹಿಸುತ || 86 ||
ಬೆಡಗನು ತೋರಿಸುತ | ಎಲ್ಲರ ಮನ | ಕಡುತ ಮೋಹಿಸುತ ||
ಪೊಡವಿಪನಿದಿರಿನಲಿ | ಕುಣಿದರು | ಸಡಗರ ತೋರುತಲಿ || 87 ||

**ಭಾಮಿನಿ**

ಎಲೆ ಧರಾಧಿಪ ಕೇಳು ಸ್ತ್ರೀಯರ |
ಬಲೆಗೆ ಸಿಲುಕದರ್ಯಾರು ತ್ರಿಜಗದಿ |
ಲಲನೆಯರ ನರ್ತನಕೆ ಮೆಚ್ಚುತ ಕರೆದವರೊಳಾಗ ||
ಇಳೆಯ ಪಾಲಕನೆಂದ ತವ ಮನ |
ದೊಲವ ಪೇಳಿರಿ ಕೇಳ್ವೆನೆನಲಾ |
ಗಳಿಗೆಯೊಳು ನಗುತೆಂದರಾ ಕಪಟಾನ್ವಿತೆಯರವಗೆ || 88 ||

**ಸುರುಟಿ – ಏಕ**

ಕೇಳು ಕೇಳು ಪ್ರಭುವೇ | ಕೊಡುವೆಯ |
ಕೇಳ್ವುದ ಪೇಳ್ ನಿಜವೇ ||
ತಾಳು ಮುಂದೆ ನೀ | ಪೇಳಿದ ತೆರದಲಿ |
ಚಾಳಿಸಿದರೆ ನಾವು | ಕೇಳೆವು ಸರ್ವಥ || 89 ||
ಮುತ್ತಿನ ಛತ್ರವನು | ಕೊಡು ನೀ |
ಎತ್ತಿಯೆ ನಮಗದನು ||
ಮಿತ್ರಕುಲಜ ಬೇರೆ | ಮತ್ತೇನ್ ಬೇಡೆವು |
ಇತ್ತರೆ ನೀನದ | ನರ್ತಿಯ ಪಡೆವೆವು || 90 ||
ಕೊಡೆ ಕೊಡೆ ಕೇಳ್ವುದನು | ಸರ್ವಥ |
ಕಡೆಗೆ ಕೇಳುವದೇನು ||
ತಡೆಯದೆ ಎನ್ನೊಳು | ನುಡಿ ನುಡಿರೆಂದೆನೆ |
ಪೊಡವಿಪಗೆಂದರು | ಜಡಜಾಂಬಕಿಯರು || 91 ||
ಸತಿಯರಪ್ಪೆವು ನಿನಗೆ | ನಮಗೆ ನೀ |
ಪತಿಯೆನಿಸೈ ಕಡೆಗೆ ||
ಮತಬೇರಿಲ್ಲೆನೆ | ಕೇಳುತ ಭೂಪನು |
ಸತಿಯರಿಗೆಂದನು | ಖತಿಯನು ತಾಳುತ || 92 ||

**ಘಂಟಾರವ - ಝಂಪೆ**

ಪೇಳಿದೇನೆನ್ನೊಡನೆ | ಹಾಳು ಬಾಲಕಿಯರಿರ |
ಬೋಳುಗೈಸುವೆ ನಿಮ್ಮ ತಲೆಯ ||
ಕೀಳು ಜಾತಿಯರಾಗಿ | ವಲಿಸ ಪೇಳ್ವರೆಯೆನ್ನ |
ಕಾಲ ಕಡು ಕಷ್ಟ ದಿಟವೈಸೆ || 93 ||
ಧಾರಿಣಿಯೊಳೀವರೆಗೆ | ಯಾರು ಕೇಳ್ದವರಿಲ್ಲ |
ಈ ರೀತಿ ಬಂದು ಎನ್ನೊಡನೆ ||
ಬೇರೇನುಪಾಯವಿ | ಲ್ಲೆನುತ ಚಾರರ ಕರೆದು |
ನಾರಿಯರ ಹೊಯ್ದು ದೂಡಿಸಿದ || 94 ||
ಪುಂಡು ಬಾಲಕಿಯರು | ಕ್ಷಣ ಮರುಗಿ ಬಿಸುಸುಯ್ದು |
ಮಂಡೆಯನು ಹೊಡಕೊಳುತ ಕರದಿ ||
ಹಿಂಡು ಶಿಷ್ಯರ ಗಡಣ | ದಿಂದಿರ್ಪ ಮುನಿವರನ |
ಕಂಡು ಪೇಳಿದರು ತಾವೈದಿ || 95 ||

**ನೀಲಾಂಬರಿ - ಏಕ**

ಮುನಿಪ ನೋಡೆಮಗಾದುದ | ಘನತರದ ಗಾಯ |
ಜನಪನೆಮಗೆ ಮಾಡಿದ ||
ವಿನಯದಿ ನೀ ಪೇಳಿದಂತೆ | ನಾವಲ್ಲಿಗೆ |
ಕ್ಷಣದಿ ಸಾಗಿದೆವು ಮುಂತೆ || 96 ||
ರೂಢಿಪಾಲಕನ ಠಾವಿಗೆ |
ಪೋಗಿ ನಾವಲ್ಲಿ ನಾಟ್ಯ |
ವಾಡೆ ಸೋತ ಭೂಪ ನಮಗೆ ||
ಬೇಡಿಕೊಳ್ಳಿರಿ ಕೊಡುವೆ ತಾನೆಂದ | ಛತ್ರವ ಕೇಳೆ |
ರೂಢಿಪಾಲ ಕೊಡೆನು ತಾನೆಂದ || 97 ||
ಅರಸನಾಗಿ ಒಲಿಸು ಎನ್ನಲು | ಭೂಪತಿ ಕೋಪ |
ಧರಿಸಿಕೊಂಡು ಹರನವೋಲು ||
ಚರರ ಕರೆದು ಹೊಯ್ಸಿ ನೂಕಿದ | ಸರ್ವಾಂಗದಲ್ಲಿ |
ಬರುವ ನೆತ್ತರ ನೋಡಯ್ಯ || 98 ||

**ಭಾಮಿನಿ**

ಎಲೆ ಪರೀಕ್ಷಿತತನಯ ಕೇಳಾ |
ಲಲನೆಯರು ತಾವೆಂದ ನುಡಿಯನು |
ಮುನಿಲಲಾಮನು ಕೇಳಿ ಕಿಡಿಗೆದರುತ್ತ ಹೂಂಕರಿಸಿ ||
ಇಳೆಯಪಾಲಕನಿಂತುಗೈದನೆ |
ನೆಲೆಯನರಿಯನೆ ನಮ್ಮದೆನುತಾ |
ಹೊಲತಿಯರ ಕೂಡಾಡಿ ಬಂದಾ ಭೂಪಗಿಂತೆಂದ || 99 ||

**ಮಾರವಿ - ಏಕ**

ಸೃಷ್ಟಿಪ ಕೇಳ್ ನೀ | ಕೊಟ್ಟಿಹ ವಚನವ |
ಬಿಟ್ಟೀ ಅಬಲೆಯರ ||
ಸಿಟ್ಟಿಲಿ ಹೊಯ್ಸಿದೆ | ದಿಟ್ಟನೆಂದೆನುತಲಿ |
ಕಷ್ಟವ ಬಯಸಿದೆಲಾ || 100 ||
ಬಿಡುವೆನೆ ಶಾಪವ | ಕೊಡುವೆನು ಹಿಡಿ ಹಿಡಿ |
ಧಡಿಗ ಧರಾಧಿಪನೆ ||
ಮಡದಿಯರೆಂಬುದ | ತಿಳಿಯದೆ ಪೋದೆಯ |
ಸುಡು ಸುಡು ಬಾಹಿರನೆ || 101 ||
ಎಂದಾ ಮುನಿಪನ | ವಚನಕೆ ಭೂಪತಿ |
ನಿಂದು ಕೈಜೋಡಿಸುತ ||
ವಂದನೆಯನು ಗೈ | ದೆಂದನು ಕುಶಿಕನ |
ಕಂದಗೆ ದೈನ್ಯದೊಳು || 102 ||

**ನೀಲಾಂಬರಿ - ಝಂಪೆ**

ಏನಿದೇನೆನ್ನೊಡನೆ | ಮುನಿಸು ಮುನಿವರನೆ ||
ದಾನವಾಂತಕನಾಣೆ | ನುಡಿಗೆ ತಪ್ಪುವೆನೆ || ಪ ||
ಬಾಲೆಯರ ಗಾಯನಕೆ | ಮೆಚ್ಚಿ ನಾನೊರೆದೆ |
ಪೇಳಿ ಮನದಿರವನೆನ | ಲರುಹಿದರು ನಿಲದೆ ||
ಲೀಲೆಯಲಿ ಛತ್ರವನು | ಬೇಡೆ ನಾನದನು ||
ಕೇಳಿ ದುಗುಡವ ತಾಳಿ | ಕೊಡೆನೆಂದೆನಿನ್ನು || 103 ||
ಪತಿಯಾಗು ಎಂದೆನಲು | ಖತಿಯ ತಾಳಿದೆನು |
ಸತಿಯರಿಬ್ಬರ ಹೊಯ್ದು | ನೂಕಿಸಿದೆ ನಾನು ||
ಕ್ಷಿತಿಪ ನಾನಾಗಿರಲು | ಅಬಲೆಯರು ಬಂದು |
ವ್ರತಿವರ್ಯನೀ ಪರಿಯ | ಪೇಳ್ವುದೇನಿಂದು || 104 ||
ಕೇಳಿದುದ ಕೊಡುವೆನೆಂ | ದೆನುತ ಪೇಳಿದೆನೆ |
ತಾಳುವುದು ಕೋಪವನು | ಸರಿಯೆ ಮುನಿವರನೆ ||
ಮಾನಿನಿಯರೆಂಬುದನು | ನಂಬಬೇಡದರ |
ಮಾನನಿಧಿ ಪೊರೆಯುವುದು | ನಾ ನಿಮ್ಮ ಕುವರ || 105 ||

**ಭಾಮಿನಿ**

ಎಲವೊ ರಾಜಾಧಮನೆ ನಿನ್ನಯ |
ಹಲವು ಮಾತಿಂದೇನು ಫಲ ಈ |
ಲಲನೆಯರ ಕೂಡುವುದು ಕೊಡದಿರಲೀಗ ಛತ್ರವನು ||
ಒಲಿದು ಕೊಡಿಸುವುದೆನಲು ಕೇಳ್ದಾ |
ಇಳೆಯ ಪಾಲಕನೆಂದ ನಮ್ಮೀ |
ಪೊಳಲು ಸಿರಿಯರಮನೆಯನಿತ್ತಪೆ ಕೂಡೆನಿವರನ್ನು || 106 ||

**ಶಂಕರಾಭರಣ - ಏಕ**

ಭಳಿರೆ ಮೆಚ್ಚಿದೆ ನೃಪ ನಿನಗೆ | ನಿನ್ನಯ ಧೈರ್ಯ |
ಛಲದ ಸಾಹಸ ಗುಣಕ್ಕೆ ||
ಲಲನೆಯರನು ನಾ ಕೂಡೆನು ಸರ್ವಥ |
ಇಳೆಯ ಸರ್ವಸ್ವವ ಕೊಡುವೆನು ಯೆಂದೆಯ || 107 ||
ಕೊಡು ಕೊಡು ನೀನೆಂದುದನು | ವ್ಯರ್ಥಸ್ಯವಾಗಿ |
ಬಿಡುವುದಾದರೆ ಸರ್ವಸ್ವವನು ||
ತಡವೇತಕೆ ಮೌನವ ಹಿಡಿದುದನೆನೆ |
ಪೊಡವಿಪ ನುಡಿದನು ಕಡುತರ ದೈನ್ಯದಿ || 108 ||
ವಾಡಿಕೆಗೊಂದ ನಾ ಪೇಳಿದರೆ | ಅದರನ್ನೆ ಹಿಡಿ |
ದಾಡುವುದೇನು ಮುನಿವರನೆ ||
ರೂಢಿಗಾಶ್ಚರ್ಯವಿನ್ನಾಡುವುದೇನೆನೆ |
ಗಾಢದಿ ಮುನಿ ಬಲು ಕೋಪಿಸಿ ನುಡಿದನು || 109 ||

**ಭಾಮಿನಿ**

ಧರಣಿಪತಿ ಕೇಳೀಗಯೆನ್ನೊಳ |
ಗೊರೆದ ತೆರದಲಿ ಕೊಡು ಸಮಸ್ತವ |
ಸರುವಥಾ ತಾನೊರೆದುದಿಲ್ಲೆಂದುಸಿರು ಪೋಗುವೆನು ||
ಬರಿದೆ ಪೋಗುವನಲ್ಲ ನಾನೆನ |
ಲರಸ ನುಡಿದನು ಹರ ಹರಾ ನಾ |
ನೊರೆದುದಿಲ್ಲೆಂಬುವೆನೆ ಕೊಡುವೆನು ಸರ್ವವನು ನಿಮಗೆ || 110 ||

**ಕೇದಾರಗೌಳ - ಅಷ್ಟ**

ಎಂದು ಪೇಳುತ ಭೂಪನಂದು ತಾನಾಳ್ವ ವ |
ಸುಂಧರೆ ದ್ರವ್ಯಗಳ ||
ಇಂದೀಶ್ವರಾರ್ಪಣೆಯಾಗುತಿತ್ತಿಹೆ ಮುನಿ |
ಚಂದದಿ ಕೇಳಿರೆಲ್ಲ || 111 ||
ರನ್ನ ಭೂವರ ಇತ್ತುದೆನ್ನೊಳ ಬಂತಯ್ಯ |
ಮುನ್ನ ನಿನ್ನೊಡನಿತ್ತಿಹ ||
ಚಿನ್ನಹೇರುಗಳೆಲ್ಲ ಕೊಡಬೇಕೆಂದೆನೆ ಕೇಳಿ |
ಖಿನ್ನನಾಗುತ ನುಡಿದ || 112 ||
ಸರಕು ಒಪ್ಪಿಸಿದ ಮೇಲಿರುವುದೆ ಸುಂಕವು |
ಧರಣಿಯೊಳೆಲ್ಲಾದರು ||
ಪರಮ ಮುನೀಂದ್ರರು ಒರೆವುದಿನ್ನೇನೆಂದ |
ಧರಣಿಪಗಿಂತೆಂದನು || 113 ||
ಕನಕರಾಶಿಯ ಎನ್ನೊಳಿತ್ತುದಿಲ್ಲೆನು ಪೇಳೆ |
ವಿನಯದಿ ಪೋಪೆನಯ್ಯ ||
ಕ್ಷಣ ಮಾತ್ರ ನಿಲ್ಲದೆ ದಾರಿ ಹಿಡಿದು ಬೇಗೆಂ |
ದೆನೆ ಕೇಳಿ ನುಡಿದ ಭೂಪ || 114 ||

**ಭಾಮಿನಿ**

ಸತ್ಯವನು ನಾ ಬಿಡೆನು ಕನಕವ |
ನಿತ್ತುದೆನ್ನೊಳು ನಿಜದ ಮಾತು ಮ |
ಹೋತ್ತಮನೆ ಕೊಡು ಎನಗೆ ನಲುವತ್ತೆಂಟು ದಿನದವಧಿ ||
ಪೃಥ್ವಿಯನು ಸಂಚರಿಸಿ ನಾ ತಂ |
ದಿತ್ತಪೆನು ಕನಕಗಳನೆಂದೆನೆ |
ಮತ್ತೆ ನುಡಿದನು ಮುನಿಪ ಭೂಪತಿಯಾನನವ ನೋಡಿ || 115 ||

**ಶಂಕರಾಭರಣ - ಝುಂಪೆ**

ಇತ್ತರವಧಿಯ ನೀನು | ಎತ್ತ ಪೋಪೆಯೊ ಕಡೆಗೆ |
ಮತ್ತೇನ ಮಾಡಲೆನೆ | ಪೃಥ್ವಿಪತಿ ನುಡಿದ || 116 ||
ಕೊಡು ಸಂಗಡೊಬ್ಬನನು | ಕೊಡುವೆ ಸಂಬಳವವಗೆ |
ತಡೆಯದೆನ್ನೊಡನೀಗ | ಕಡೆಗೆ ತವ ಋಣವ || 117 ||

ಕೊಟ್ಟು ತೀರದೆ ನಿಮಗೆ | ಬಟ್ಟೆ ಬೇರೆನಗಿಲ್ಲ |
ಸಿಟ್ಟು ಮಾಡದೆ ದಯವ | ನಿಟ್ಟು ನಡೆಸುವುದು || 118 ||
ಎನಗಿತ್ತೆ ಧಾರೆಯೆರೆದು | ಸಪ್ತದ್ವೀಪವ ಮುದದಿ |
ಹಣವ ಗಳಿಸಿದು ಕೊಡುವು | ದೆಲ್ಲಿಂದ ನೀನು || 119 ||
ಹಿಂದೆ ಎನ್ನೊಳು ನೀವು | ಸಪ್ತದ್ವೀಪದ ಹೊರಗೆ |
ಯೆಂದುದಲ್ಲವೆ ಕಾಶಿ | ಪುರದೊಳಾನಿದ್ದು || 120 ||
ಹಣವ ಗಳಿಸಿದು ಕೊಡುವೆ | ಎಣಿಸಬೇಡೆನೆ ಕೇಳಿ |
ಮುನಿಪತಿಯು ಮೆಚ್ಚಿದನು | ಜನಪನತಿ ದೃಢಕೆ || 121 ||

**ವಾರ್ಧಕ**

ನಕ್ಷತ್ರದೊಡೆಯಕುಲ ಲಾಲಿಸೈ ಮೌನಿಕುಲ |
ದಕ್ಷನಾ ಬಳಿಕ ತನ್ನಯ ಮಿತ್ರನಾಗಿರುವ |
ನಕ್ಷತ್ರನೆಂಬುವನ ಕರೆದು ಪೋಗಿವನೊಡನೆ ಎನಗೆ ಬಹ ಕನಕಗಳನು ||
ಪಕ್ಷಪಾತವನೆಸಗದವನೊಡನೆ ನೀ ಬರಿದೆ |
ದಾಕ್ಷಿಣ್ಯಮಂ ತಾಳದವಧಿದಿನ ಸೂರಿಯಂ |
ಪಶ್ಚಿಮಾಂಬುಧಿಗಯ್ಯದನಿತರೊಳು ತಹುದಿಲ್ಲಿ ನಿನ್ನ ಸಂಬಳ ಸಹಿತಲಿ || 122 ||

**ಕಂದ ಪದ್ಯ**

ಇತ್ತಾ ಚರನುಂ ಸಹಿತಲಿ |
ಪೃಥ್ವಿಪ ಸತಿಸುತರನು ಒಡಗೂಡುತ ತನ್ನಯ ||
ಸತ್ಯವೆ ಸಲಹೆನುತೈದಲು |
ಮತ್ತಾ ಮುನಿಪತಿ ನುಡಿದಂ ಭೂಪನೊಳಾಗಂ || 123 ||

**ಘಂಟಾರವ - ಏಕ**

ಮೇದಿನೀಶ ನಾ ಪೇಳುವ ವಚನವನು |
ನಿಜವಾಗಿರುವುದನು || ಪ ||
ಇಲ್ಲಿಂದಲಿ ನೀನು | ಸಾಗಲು |
ಅಲ್ಲಿ ಹೋಗೆ ನಾನು |
ಕಳ್ಳನೆಂದೆನುತೆನ್ನ | ಜರೆವುತ |
ತಳ್ಳರೆ ನೃಪರೆನ್ನ ||
ತಲ್ಲಣವಪ್ಪುದು ಉಳ್ಳರೆ ಮನ ನಿನ |
ಗೆಲ್ಲ ಬಿಡಿಸಿಕೊಡು | ಉಲ್ಲಾಸದಿಂದಲಿ || 124 ||
ಡಂಗುರ ಹೊಯ್ಸುತಲಿ | ನೃಪನೆಂ |
ದುಂಗುರವೀಯುತಲಿ ||
ಹಿಂಗದೀ ಪರಿ ನಡೆಸಿ | ಕೊಟ್ಟರೆ |
ಹಂಗಿಲ್ಲವು ಸಹಸಿ ||
ಇಂಗಿತವನು ನೀ | ಹಿಂಗಿಸೆನ್ನಲು |
ಸಂಗಡ ಕರೆತಂದ | ಮಂಗಳಮುನಿಪನ || 125 ||

ಬಂದು ಸಿಂಹಾಸನಕೆ | ಏರಿಸು |
ತೆಂದನು ಪುರಜನಕೆ ||
ಇಂದಿನಾರಭ್ಯದಲಿ | ಮುನಿ ನೃಪ |
ನೆಂದು ಸಾರಿಸುತಲಿ ||
ಚಂದದಿ ಪಟ್ಟದ | ಕುಂದಣ ದುಂಗುರ |
ಚಂದದೊಳಿತ್ತಾ | ನಂದದಿ ಮುನಿಪಗೆ || 126 ||

**ಸಾಂಗತ್ಯ - ರೂಪಕ**

ಧರಣೀಶನೀ ಪರಿ ಸಾಗಲು ಋಷಿಕುಲ |
ವರಿಯಲು ಮನದಿ ಯೋಚಿಸುತ |
ಹರಿಶ್ಚಂದ್ರಭೂಪನ ವರ ಸತ್ಯ ವಚನಕ್ಕೆ |
ಸರಿಯಿಲ್ಲವಯ್ಯ ಮೂಜಗದಿ || 127 ||
ಸತ್ಯಲೋಕದ ಕರ್ತುಪುತ್ರ ತಾ ನುಡಿದುದು |
ಸತ್ಯವು ಸಟೆಯಲ್ಲ ಮಾತು ||
ವ್ಯರ್ಥದಿ ಪಂಥವ ಗೆಯ್ದೆ ತಾನೆನುತಲಿ |
ಪೃಥ್ವೀಶನನು ಎರಡನೆಗೆ || 128 ||
ಕರೆಸುತೆಂದನು ವ್ಯರ್ಥ ಧರಣಿಯೆಲ್ಲವ ಕೊಟ್ಟು |
ತಿರುಗಲೇತಕೆ ಭೂಪ ಧರೆಯ |
ತರುಣಿಯರೀರ್ವರ ವರಿಸು ನೀನೆಂದೆನೆ |
ಹರ ಹರೆನ್ನುತ ಭೂಪ ನುಡಿದ || 129 ||
ಲಲನೆಯರನು ನಾನು ಒಲಿಸಿಕೊಳ್ಳುವನಲ್ಲ |
ಇಳೆಯೊಳಾಸೆಯು ಎನಗಿಲ್ಲ ||
ಹಲವು ಮಾತಿನ್ನೇನು ಬೇಡೆಂದಪ್ಪಣೆ ಕೇಳಿ |
ಛಲದಂಕ ಪೊರಟನಾ ಪುರವ || 130 ||
ಸತಿಸುತರನು ಕೂಡಿ ಮುಂದೈದಿ ಬರುತಿರೆ |
ಶ್ರುತಕೀರ್ತಿಯೆಂಬ ಮಂತ್ರಿಯು ತಾ ||
ಪೃಥಿವೀಶಗೀ ಪರಿಯಾದ ಮೇಲೆ ನಾನಿನ್ನೀ |
ಪೃಥಿವಿಯೊಳಿರಲಾರೆನೆನುತ || 131 ||
ವ್ಯಥೆಯಿಂದ ಬೆನ್ನಟ್ಟಿ ಬರುತಿರೆ ಭೂಪನು |
ಸತಿಸುತರನು ಮರದಡಿಯ ||
ಅತಿ ದುಃಖವನು ತಾಳಿ ನಿಲಿಸಿ ಮಂತ್ರಿಯೊಳೆಂದ |
ಮತಿವಂತನಿಂತು ಸಂತಸದಿ || 132 ||

**ನೀಲಾಂಬರಿ - ಝಂಪೆ**

ಮಂತ್ರೀಶ ನೀನೆತ್ತ ತೆರಳಿ ಬಹೆಯಯ್ಯ |
ಸಂತಸದಿ ಪುರದೊಳಿರೆ ಕೊರತೆಯೇನಯ್ಯ ||
ಎಂತು ಕಳೆವೆಯೊ ನೀನು ಎನ್ನೊಡನೆ ದಿನವ |
ಬಂತೇಕೆ ಇಂಥ ಮನ ಪೇಳಯ್ಯ ಸಚಿವ || 133 ||

ಎನ್ನ ಪ್ರಾರಬ್ಧದಲಿ ದೊರಕಿತತಿ ಕಷ್ಟ |
ಎನ್ನೊಡನೆ ಬರಲೀಗ ಪ್ರಾಪ್ತಿಪುದೆ ಇಷ್ಟ ||
ಮುನ್ನಿನಂದದಿ ನಿನ್ನ ಕೂಡಿರ್ಪರೆನಗೆ |
ಪುಣ್ಯವಿಲ್ಲದೆ ಹೋಯ್ತು ಪೋಗು ಪುರದೆಡೆಗೆ || 134 ||
ಪೇಳಯ್ಯ ಬುದ್ಧಿಯನು ನಯದಿ ಪ್ರಜೆಗಳಿಗೆ |
ಕೇಳದಿರ್ಪರೊ ಏನೊ ಮುನಿವಚನ ಕಡೆಗೆ ||
ಪೇಳಿದಂದದಿ ಜನರು ನಡೆಯದಿರೆ ಮುನಿಪ |
ತಾಳದಿರುವನೆ ಕೋಪ ಮಂತ್ರಿಕುಲದೀಪ || 135 ||
ದೂರದೇಶದೊಳಿರುವ ನಮ್ಮ ಪ್ರಜೆಗಳನು |
ಯಾರರಿವರ್‍ಯ ಪುರದಿ ನೀ ಹೊರತವರು ||
ಘೋರನೈದದರಿಂದ ಊರಿಗೆಂದೆನಲು |
ಧೀರ ಸಚಿವನು ಪೇಳ್ದ ನಿಂದು ಕೈಮುಗಿದು || 136 ||

**ಭಾಮಿನಿ**

ಮರುಗಿಸದಿರೆನ್ನುವನು ಭೂಪತಿ |
ಪುರಕೆ ತೆರಳುವನಲ್ಲ ನಿನ್ನನು |
ಸರುವಥಾ ನಾ ಬಿಡೆನು ಕೋಪಿಸಿಕೊಂಡು ನೀನೆನ್ನ ||
ಬರಲು ಬೇಡೆನ್ನೊಡನೆ ಎಂದರೆ |
ಹರಣವನು ಕಳಿಕೊಂಬೆನಲ್ಲದೆ |
ಧೊರೆಯೆ ನಿನ್ನಯ ಕಷ್ಟವೆನ್ನದು ಎನುತ ನಿಂದಿರ್ದ || 137 ||

**ದ್ವಿಪದಿ**

ಎಂದು ಪೇಳಿದ ಮಂತ್ರಿಯನು ಸಹಿತಲಾಗ ||
ಚಂದ್ರಮತಿ ಸುತ ಸಹಿತ ಭೂಪನತಿ ಬೇಗ || 138 ||
ಬಂದನೊಟ್ಟೊಡಗೂಡಿ ಬಹಳ ಮಾರ್ಗವನು ||
ಮುಂದೆ ಪಥದೊಳಗಾದ ಪರಿಯ ಪೇಳುವೆನು || 139 ||
ನಡೆಯಲಾರದೆ ಸತಿಯು ಬಿಸಿಲುರಿಯು ತಾಗಿ ||
ತಡೆಯದಲ್ಲಿಯೆ ಸೋತು ನಿಲ್ಲುತಿರಲಾಗಿ || 140 ||
ಪೊಡವಿಪನು ಕೈಹಿಡಿದು ನಡೆಸಿಕೊಳ್ಳುತ್ತ ||
ಬಿಡದೆ ಮುಂದೈತಂದ ಕೇಳು ಮರುಗುತ್ತ || 141 ||
ಮತ್ತು ಮುಂದೊದಗುತಿರೆ ಕಲ್ಲು ಮುಳ್ಳುಗಳು ||
ಒತ್ತೊತ್ತಿ ನಾಟಿದವು ಸರ್ವರಿಗೆ ಕೇಳು || 142 ||
ಪುತ್ರನದ ಸೈರಿಸದೆ ಬೀಳುತೇಳುತ್ತ ||
ಹೆತ್ತವರ ಕರೆಕರೆದು ದುಃಖಿಸಿದನತ್ತ || 143 ||

**ಮಾರವಿ - ಏಕ**

ನಡೆಯಲಾರೆನು ಅಮ್ಮ ಬಿಸಿಲಲಿ | ಇಕ್ಕೊ |
ಒಡೆದುದೆನ್ನಯ ಕಾಲು ಕಲ್ಲಲಿ ||
ನುಡಿವೆನೆಂದರೆ ಬಾಯಿ ಬರದಲ್ಲ | ಅಮ್ಮ |
ನಡುಗುವುದೆನ್ನ ಕೈ ಕಾಲೆಲ್ಲ || 144 ||

ಪುತ್ರನಲ್ಲವೆ ನಿಮಗಪ್ಪಯ್ಯ | ಎನ್ನ |
ಎತ್ತಿಕೊಳ್ಳಲು ಬಾರದೇನಯ್ಯ ||
ಮತ್ತಾರಿರ್ಪರು ಒಬ್ಬನಲ್ಲವೆ | ಎನ್ನ |
ನೆತ್ತಿಕೊಳ್ಳಲು ಬಾರದೆ ನೀವೆ || 145 ||
ಹಸಿವಾಗುತಿದೆ ನೋಡು ಬಿಸಿರಲಿ | ತಾಯೆ |
ಶಿಶುವಲ್ಲವೇನಮ್ಮ ಮನಸಿಲಿ ||
ವ್ಯಸನಗೊಳ್ಳದೆ ನಿಮ್ಮ ಹೃದಯವು | ಎಂದು |
ವಸುಧೆಗೊರಗಿದ ತಾಳದೆ ನೋವು || 146 ||

**ಭಾಮಿನಿ**

ಪುತ್ರನೀ ಪರಿ ಸಲಲು ಮೂರ್ಛೆಗೆ |
ಹೆತ್ತ ತಾಯ್ತಂದೆಯರು ಕಾಣುತ |
ಎತ್ತಿದರು ಕೈ ನೀಡಿ ಹಾ ಹಾ ಮಗನೆ ಹಾಯೆನುತ ||
ವ್ಯರ್ಥ ಮರುಗದಿರೆನುತ ಬಿಡದುರೆ |
ಮುತ್ತನೀಯುತ ಸಂತವಿಸೆ ಬಳಿ |
ಕಿತ್ತ ನುಡಿದನು ದೂತ ಭೂವರನಿಂಗೆ ಗರ್ಜಿಸುತ || 147 ||

**ಕಾಂಭೋಜಿ - ಝಂಪೆ**

ವಸುಧೀಶ್ವರನೆ ನಿನ್ನ ಸುತನಂತೆ ಘನವಾದ |
ಹಸಿವು ಎನಗಿಲ್ಲವೇನಯ್ಯ ||
ಕುಶಲವನು ನೀ ನೋಳ್ಪ ಪುತ್ರನದೆಯೆಂದೆನುತ |
ಬಿಸಿರ ಕಾಣಿಸುತಲಿಂತೆಂದ || 148 ||
ಕೊಡು ಎನ್ನ ಸಂಬಳವ ಪೊಡವಿಪನೆ ಎಂದೆನುತ |
ಕಡು ಬಿಸಿಲಿನೊಳಗವನ ನಿಲಿಸಿ ||
ಬಿಡದೆ ಕೊರಡೆಗಳಿಂದ ಎಡೆಬಿಡದೆ ಪಾದವನು |
ಹೊಡೆದನೇನೆಂಬೆನಾ ಸಹಸಿ || 149 ||
ಕಾಣುತೀ ಪರಿ ಸತಿಯು ಪ್ರಾಣನಾಥನೆ ಎನುತ |
ಕ್ಷೋಣಿಯೊಳು ಬೀಳುತೇಳುತ್ತ ||
ಏನ ಗೆಯ್ಯುವೆ ಪತಿಯ ನೀನು ದಾರಿಯೊಳೆಂದು |
ಮಾನವಂತೆಯು ಪೇಳ್ದಳಳುತ || 150 ||

**ನೀಲಾಂಬರಿ - ಏಕ**

ನಡುಮಾರ್ಗದೊಳು ಎನ್ನ ರಮಣನ | ಇಂತು |
ತಡೆವರೇನೈ ನೀನು ತವ ಧನ ||
ಕೊಡುವುದೆಲ್ಲಿಂದಲಿ ಪೇಳಯ್ಯ | ಇಂಥ |
ಕಡು ಕಷ್ಟವನು ಕೊಟ್ಟು ಕೊಲುವೆಯ || 151 ||
ಚಿಣ್ಣಗುಣ್ಣುವರಿಲ್ಲದಾತನು | ಬಲು |
ಬಣ್ಣಗುಂದಿಯೆ ಬಸವಳಿದನು ||
ಕಣ್ಣು ಕಾಣದೆ ನಿನಗೇನಯ್ಯ | ಆಹಾ |
ಪುಣ್ಯವೆಮ್ಮದು ಪೇಳ್ವೆ ಕೇಳಯ್ಯ || 152 ||

ಸೇರಿದಂತರದೊಳೊಂದೂರನು | ಎಲ್ಲ |
ತೀರಿಪೆ ನಿನ್ನ ಸಂಬಳವನು ||
ದಾರಿಯೊಳ್ ಬಳಲಿಸಬೇಡೆಂದು | ನೃಪ |
ನಾರಿ ಸಂತೈಸಿದಳ್ ಬಲು ನೊಂದು || 153 ||

**ಭಾಮಿನಿ**
ಅರಸ ಕೇಳೈ ದೂತನನು ನೃಪ |
ತರುಣಿ ಸಂತವಿಸಲ್ಕೆ ಸರ್ವರು |
ತೆರಳಿ ಮುಂದೈತರಲು ವಿಶ್ವಾಮಿತ್ರ ಮುನಿವರನು ||
ಧರಣಿಪನ ಸತ್ಯವನು ಕೆಡಿಸಲು |
ಧರಿಸಿ ಕಪಟಾಕೃತಿಯ ಮಾರ್ಗದಿ |
ಕರದಿ ಪಾದುಕೆಗಂಟ ಪಿಡಿದೈತಂದನೆದುರಾಗಿ || 154 ||

**ಕೇದಾರಗೌಳ - ಅಷ್ಟ**
ಬಂದು ಭೂಮಿಪನ ಕಂಡೆಂದನು ನೀವೆಲ್ಲ |
ರೊಂದಾಗಿ ಸತಿಸುತರು ||
ಇಂದೆಲ್ಲಿ ಪೋಗುವುದೆಲ್ಲರ ಮುಖಸಿರಿ |
ಕುಂದಿದೆ ಕಾಲುಗಳು || 155 ||
ಒಡೆದು ನೆತ್ತರು ಸೂಸಿ ನಡೆಯಲಾರದೆ ಬಾಯ |
ಬಿಡುವಿರೇತಕೆ ಬರಿದೆ ||
ಕೊಡುವೆನೀ ಪಾದುಕೆ ನಿಮಗೆ ನಾನೆನೆ ಕೇಳಿ |
ಪೊಡವಿಪನಿಂತೆಂದನು || 156 ||
ಬೇಡಯ್ಯ ಮುನಿಗಿತ್ತ | ರೂಢಿಯೊಳಿಹ ವಸ್ತು |
ಕೇಡೆಂದು ಕೈಕೊಳಲು ||
ಕಾಡದೆ ದುರಿತವು ಸತ್ಯಬಾಲಕಿ ಕೋಪ |
ಮಾಡಳೆ ನಡೆಯೆಂದನು || 157 ||
ಪೃಥ್ವೀಶನೀ ಪರಿ ಪೇಳಿ ಮುಂದೈತರೆ |
ಛತ್ರವ ಪಿಡಿದೋರ್ವನು ||
ಹತ್ತಿರಕೈತಂದು ನುಡಿದನು ಕೊಳ್ಳೆನು |
ತರ್ತಿಯೊಳದನು ತಾನು || 158 ||
ಏನೋ ಕೃತ್ರಿಮ ಮತ್ತೆ | ನ್ನೇನೊ ಚೋದಿಗವೆಂದು |
ಮಾನವಾಧಿಪ ಯೋಚಿಸಿ ||
ದಾನವಾಂತಕನನು ಸ್ಮರಿಸಿಯೆ ಮುಂದೊತ್ತಿ |
ಸಾನುರಾಗದಿ ನಡೆದ || 159 ||

**ಸೌರಾಷ್ಟ್ರ - ತ್ರಿವುಡೆ**
ಮುಂದೆ ಬರುತಿರಲೋರ್ವ ವಿಪ್ರ ತಾ |
ನೊಂದು ಠಾಣದಿಯರವಟಿಕೆ ಜಲ |
ತಂದು ಮಾರ್ಗದಿ ಕುಳಿತುಕೊಂಡವ | ಗೆಂದ ಕರೆದು || 160 ||

ಯಾರು ನೀವೀಗೆತ್ತ ಪೋಪಿರಿ |
ದಾರಿಯೊಳು ಮಧ್ಯಾಹ್ನ ಕಾಲದಿ |
ನೀರ ಕೊಳ್ಳಿರಿ ಬಿಸಿಲ ತಣಿಸುತ | ಸಾರಿ ಕಡೆಗೆ || 161 ||
ನಡೆನಡೆದು ಬಲು ದಣಿದ ನಿನ್ನಯ |
ಮಡದಿಸುತರಿಂಗಾದರೆಯು ಜಲ |
ಕೊಡಿಸು ನೀನೆನೆ ಕೇಳಿ ಭೂಪತಿ | ನುಡಿದನವಗೆ || 162 ||
ದಾನವಿತ್ತಿಹ ರಾಜ್ಯದಲಿ ವರ |
ಪಾನಿಯವ ನಾ ಕೊಂಡೆನಾದರೆ |
ಕ್ಷೋಣಿಯೊಳು ದತ್ತಾಪಹಾರದ | ಹಾನಿಯಹುದು || 163 ||
ಬೇಡೆನುತ ಮುಂದೈದುತಿರೆ ನಡು |
ಕಾಡೊಳುರಿ ಪ್ರಜ್ವಲಿಸುತಿವರನು |
ಕೂಡೆ ಬೆದರಿಸಿತಾಗ ಲಾಲಿಸು | ರೂಢಿಪಾಲ || 164 ||

**ಕಂದ ಪದ್ಯ**
ಇಂಥಾ ದಾವಾನಲವುಂ |
ಮುಂತೈದಲು ಬಿಡೆನೆಂದಡ್ಡವಿಸಲು ಭೂಪಂ ||
ಕುಂತವು ತಾಗಿದವೊಲು ಬಲು |
ಚಿಂತಿಸಿ ದೊಪ್ಪನೆ ಧರೆಗಡಗೆಡೆದಿಂತೆಂದಂ || 165 ||

**ನೀಲಾಂಬರಿ - ಝಂಪೆ**
ಏನಿದೇನಿದು ಪುಣ್ಯಗುಣವು ಹಾ ವಿಧಿಯೆ |
ದಾನವಾಂತಕ ಕಾಯೊ ಎನ್ನ ಶ್ರೀಹರಿಯೆ ||
ಕಾನನದ ದಾವಾಗ್ನಿ ಸುಡಲೊದಗಿತೀಗ |
ಸಾನುರಾಗದಿ ಕಾಯ್ವರ್ಯಾರಿಹರು ಬೇಗ || 166 ||
ಋಷಿವರನ ಋಣಶೇಷ ತೀರೆ ನಂತರದಿ |
ಬಸುಮವಾಗಲಿ ದೇಹವಂಜೆ ನಾ ದಿಟದಿ ||
ವಸುಧೆಯೊಳು ದುರ್ಮರಣವಹ ಕಾಲ ಬಂತು |
ಬಿಸಜಮಿತ್ರನ ಕುಲದೊಳೊದಗಿತೇಕಿಂತು || 167 ||
ಸತಿಸುತರ ಮರಣವನು ಕಾಂಬುವುದರಿಂದ |
ಗತಿಸುತಗ್ನಿಗೆ ಬೀಳ್ವೆನೆನುತ ನಡೆತಂದ ||
ಶ್ರುತಿಕೀರ್ತಿ ಸಚಿವ ತಾ ನೋಡಿ ಬೇಡೆನುತ |
ಪೃಥಿವಿಪಗೆ ನುಡಿದಾಗ ಬಂದಡ್ಡ ನಿಲುತ || 168 ||

**ಭಾಮಿನಿ**
ಧರಣಿಪನೆ ನೀನೀಗಲಗ್ನಿಗೆ |
ಹರಣವನು ಕೊಡಬೇಡೆನಲು ಭೂ |
ವರನು ನುಡಿದನು ದೊರಕಿತೆನಗತಿ ಕಷ್ಟವದರಿಂದ ||
ತರುಣಿ ಸುತರನು ಭಗಿನಿ ಪುತ್ರರ |
ತೆರದಿ ನೋಡಿಕೊ ಎನುತ ತಾ ಮುಂ |
ಬರಿಯೆ ಬಾಲಕ ಕಂಡು ಕಾಲ್ಪಿಡಿದಳಲುತಿಂತೆಂದ || 169 ||

**ಕೇದಾರಗೌಳ - ಅಷ್ಟ**

ಎಲ್ಲಿಗೈದುವದು ನೀನೆಮ್ಮನು ವಂಚಿಸಿ |
ಬಲ್ಲವನಾಗಿ ತಾತ ||
ಇಲ್ಲವೆ ಪ್ರೀತಿ ಎನ್ನಲ್ಲಿ ನಿನಗೆ ಬೇಗ |
ನಿಲ್ಲದೆ ತಿಳುಹು ಮಾತ || 170 ||
ಆಗಲಿ ಹೋದರೆ ನಾವು ಹೊಗಲ್ಯಾರ ಮರೆಯನು |
ಜಗತಿಯೊಳ್ ಮೋಹವಿಟ್ಟು ||
ಮಗುವು ಎಂದೆನುತೆನ್ನ ತೋಷಿಪರ್ಯಾರಯ್ಯ |
ಸುಗುಣನೆ ಧೈರ್ಯಗೊಟ್ಟು || 171 ||
ಮಾತೆಯ ಪತಿವ್ರತಾಧರ್ಮವ ನಡೆಸುವ |
ದಾತರ್ಯಾರಿಹರಯ್ಯನೆ ||
ಭೂತಳದೊಳಗಾರ ಸತಿಸುತರೆಂಬರು |
ನೀತಿಯೆ ತಿಳಿ ಪಿತನೆ || 172 ||

**ಕೇದಾರಗೌಳ - ಝಂಪೆ**

ಪುತ್ರನೆಂದುದ ಕೇಳುತ | ಮೋಹದೊಳು |
ಧಾತ್ರೀಶನೆಂದ ನಗುತ ||
ಹೆತ್ತ ತಾಯಿಹಳು ಮಗನೆ | ಬಿಡಳಯ್ಯ |
ಸತ್ಯವಿದು ಕೇಳ್ ಸುಗುಣನೆ || 173 ||
ಪುತ್ರಿಯಂದದಿ ತಾಯನು | ಮಂತ್ರೀಶ |
ಸತ್ಯದಲಿ ಸಲಹದಿರನು ||
ಮತ್ತೇನು ಚಿಂತೆ ಬೇಡ | ಎಂದು ಮುಂ |
ದೊತ್ತೆ ಸುಜನರ ಪ್ರೌಢ || 174 ||
ತರುಣಿ ಕಾಣುತ ಬೇಗದಿ | ಹರಿತಂದು |
ಎರೆಯನಿದ್ದೆಡೆಗೆ ಭರದಿ ||
ಕರವೆರಡ ಮುಗಿದು ತನ್ನ | ಪೇಳಿದಳು |
ಮರುಗುತಲಿ ವನಿತೆರನ್ನ || 175 ||
ಚಿತ್ತದೊಲ್ಲಭ ಸೈರಿಸು | ಪೊಗುವೆನುರಿ |
ಮುತ್ತೈದೆತನದಿ ಲೇಸು ||
ಮತ್ತೇನು ಫಲವು ಬಾಳಿ |
ನೀ ಪೋಗಿ | ನಿತ್ಯ ವೈಧವ್ಯ ತಾಳಿ || 176 ||

**ಭಾಮಿನಿ**

ಎಂದೆನುತ ಭೂಕಾಂತನಂಘ್ರಿ |
ದ್ವಂದ್ವಕಾನತಳಾಗಿ ತನ್ನಯ |
ಕಂದನನು ಮುದ್ದಿಸುತ ಮೈತಡವರಿಸಿ ಸುಮನಸರ ||
ವೃಂದಕಾನತಳಾಗಿ ದೇವ ಮು |
ಕುಂದನಂಘ್ರಿಯ ಸ್ಮರಿಸಿ ಭಕ್ತಿಯೊ |
ಳಂದು ದುಮ್ಮಿಕ್ಕಿದಳು ದಾವಾನಲನ ಮಧ್ಯದಲಿ || 177 ||

**ಸಾಂಗತ್ಯ - ರೂಪಕ**

ಧರಣೀಶ ಕೇಳ್ ನೃಪತರುಣಿ ಹರಿಯ ಪದ |
ಸ್ಮರಿಸುತಗ್ನಿಗೆ ಬೀಳೆ ಜ್ವಲನ ||
ತೆರಳಿದನತ್ತತ್ತ ತರಳೆಯ ಮುಟ್ಟದೆ |
ಒರೆವೆನೇನತಿ ಕೌತುಕವ ನಾ || 178 ||
ಹರಿಶ್ಚಂದ್ರಭೂಪನು ಕಾಣುತ್ತ ಹರುಷವ |
ಧರಿಸಿದ ತನ್ನಯ ಮನದಿ ||
ಸುರವರರೆಲ್ಲರು ಸುರಿಸಿದರಬಲೆಯ |
ಸಿರಿಮುಡಿಗಮಲ ಪೂಮಳೆಯ || 179 ||
ಬಳಿಕೆಂದ ಭೂಪನೊಳ್ ನಕ್ಷತ್ರನೆಂಬವ |
ನಿಳೆಯೊಳು ಮುನಿಪನ ಋಣವ ||
ಸಲಿಸದೆ ನಿನ್ನನು ಸುಡನೊಲ್ಲನಗ್ನಿಯು |
ಹಲವೇಕೆ ಮಾತು ಭೂವರನೆ || 180 ||
ಕೊಡು ಕೊಡು ಸಾಲವ ತಡವೇಕೆಂದೆನುತಲಿ |
ಪೊಡವಿಪಾಲಕನನ್ನು ಹೊಯ್ದು ||
ಒಡನೆ ಎಳೆಯಲಾಗ ಕಾಣುತ್ತ ಭೂಮಿಪ |
ನುಡಿದನು ಕಡು ದೈನ್ಯದಿಂದ || 181 ||
ತೋರುವುದದೆ ಕಾಶಿಪುರವರವದಕಿನ್ನು |
ದೂರವಿಲ್ಲವು ಹತ್ತಿರಿಹುದು ||
ಸಾರಿದು ಮಾತ್ರದಿ ಕೊಡುವೆ ಧನವನೆಂದು |
ಧಾರಿಣಿಪತಿ ಸಂತವಿಸಿದ || 182 ||
ಒರೆದು ಈ ಪರಿ ಮುಂದೆ ತೆರಳಿದರ್ ಕಾಶಿಗೆ |
ವರ ಮಹೇಶನ ಕಂಡು ನಮಿಸಿ ||
ಹರುಷದಿಂ ಸ್ನಾನವ ಗೆಯ್ದಾಗ ಗಂಗೆಯೊಳ್ |
ಸ್ಮರಿಸುತಿರ್ದರು ಸಾಂಬಶಿವನ || 183 ||

**ಭಾಮಿನಿ**

ಇಳೆಯರಸ ಕೇಳ್ ಪುರದ ವಿಭವವ |
ನಿಳೆಯ ಪತಿ ನೋಡುತ್ತ ದಿನವನು |
ಕಳೆವುತಿರೆ ಕಂಡಾಗ ದೂತನು ಮನದಿ ಕೋಪಿಸಲು ||
ತಳುವದಾಕ್ಷಣ ತಿಳಿದು ಭೂಪತಿ |
ಮುನಿಲಲಾಮಗೆ ಪೇಳಿದವಧಿಯೊ |
ಳುಳಿದುದೈ ಮುಂದಿನ್ನು ಎರಡೇ ದಿನವು ತನಗೆನುತ || 184 ||

**ಕಾಂಭೋಜಿ - ಝಂಪೆ**

ಎಂದು ಯೋಚಿಸುತ ನೃಪ | ನೆಂದ ಮುನಿಪನ ಋಣವ |
ಒಂದುಳಿಯದಂತೆ ಕೊಡ | ಲೆಂದೇನು ಹದನ || 185 ||
ಅನ್ನವಿಲ್ಲದೆ ಮಾರ್ಗ | ವನ್ನು ನಾವ್ ನಡೆದು ಬಲು |
ಬಣ್ಣಗುಂದಿದರೆಲ್ಲ | ಚಿಣ್ಣ ಸಹ ದಣಿದು || 186 ||

ಪರಸೇವೆಯನು ಮಾಡು | ತಿರಲಾರೆವೀಗ ನಮ |
ಗಿರದು ತ್ರಾಣವು ಧನವ | ಭರದಿ ನಾವೀಗ || 187 ||
ಬೇಡಿ ಕೊಡುವರೆ ಋಣವು | ನೋಡಿದರೆ ತುಸುವಲ್ಲ |
ಬೇಡಿದರು ಕೊಡರ್ಯಾರು | ರೂಢಿಯೊಳಗಿಂದು || 188 ||
ಗುರುತವರಿಯರು ಎನ್ನ | ವರ ಕಾಶಿಪುರವರದಿ |
ದೊರಕದದರಿಂ ಸಾಲ | ಹರ ಹರೇನ್ ಗೆಯ್ವೆ || 189 ||
ಹೇಗೆ ಕೊಡುವೆನು ಋಣವ | ಹೇಗೆ ಸತ್ಯವ ಪೊರೆವೆ |
ಹೀಗೆನಲು ಪತ್ನಿಸುತ | ರಾಗ ಪೇಳಿದರು || 190 ||

**ಸೌರಾಷ್ಟ್ರ - ತ್ರಿವುಡೆ**

ಮರುಗಲೇತಕೆ ಭೂಪನೀ ಪರಿ |
ವರಮುನೀಂದ್ರರ ಸಾಲವೀವಡೆ |
ಭರದಿ ನಮ್ಮನು ಮಾರಿ ಋಣವನು | ಪರಿಹರಿಪುದು || 191 ||
ತರಣಿಕುಲದಲಿ ಪುಟ್ಟಿದವನಿಪ |
ತರುಣಿತರಳರ ಕೊಟ್ಟನೆಂಬೀ |
ಪರಿಹಾಸ ಪ್ರಾಪ್ತಿಪುದು ಕೇಳಿಲೆ | ತರುಣಿರನ್ನೆ || 192 ||
ಯಾರ ನುಡಿಯಿಂದೇನಹುದು ವರ |
ಪ್ರಾರಬ್ಧ ಫಲ ಬಿಡದಿದ್ಯಾರನು |
ಯಾರು ಬಲ್ಲರು ನಮ್ಮ ಗುರುತವ | ಊರ ಜನರು || 193 ||
ವನಿತೆಯೆಂದುದ ಕೇಳಿ ಭೂಪನು |
ತೃಣವ ಕಟ್ಟುತಲವರ ಕಾಲಿಗೆ |
ಮನೆ ಮನೆಗೆ ಕರೆದೊಯ್ದು ಕೇಳಿದ | ಜನಪನಳುತ || 194 ||
ಮಾರುವೆನು ಸತಿಸುತರ ವಿತ್ತಕೆ |
ಯಾರು ಕೊಳ್ಳುವಿರೆನುತ ಮತ್ತಾ |
ದಾರಿಯಲಿ ನಿಲುತೆಲ್ಲ ಕೇಳಿದ | ನೂರ ಜನರ || 195 ||

**ಭಾಮಿನಿ**

ಧರಣಿಪತಿ ಕೇಳಿಂತು ಭೂಪನು |
ಕರೆದು ಸರ್ವರ ಕೇಳುತಿರುತಿರೆ |
ಪರಮ ಋಷಿ ಕೌಶಿಕನು ತಿಳಿದನು ಜ್ಞಾನದೃಷ್ಟಿಯಲಿ ||
ಕರೆದನಲನೊಳಗೆಂದ ಪೋಗತಿ |
ಭರದಿ ಕಾಶಿಗೆ ವಿಪ್ರವೇಷವ |
ಧರಿಸಿಕೊಂಡಲ್ಲಿರುವ ಹರಿಶ್ಚಂದ್ರಾಖ್ಯ ಸತಿಸುತರ || 196 ||
ಪಡೆಯಬೇಹುದು ವಿತ್ತವೀಯುತ |
ಒಡನೆ ಕೊಂಡವರನ್ನು ಬಹು ಪರಿ |
ಬಿಡದುಪದ್ರಿಸಬೇಕೆನಲು ಸಪ್ತಾರ್ಚಿ ಬೇಗದಲಿ ||
ತಡೆಯದಾಕ್ಷಣ ಕೌಕನೆನ್ನುವ |
ಪೊಡವಿಯಮರನ ವೇಷದಲಿ ತಾ |
ಕಡು ಧನಿಕನೆನಿಸುತ್ತಲಿರ್ದನು ಪರಮ ಹರುಷದಲಿ || 197 ||

**ಕಾಂಭೋಜಿ - ಝಂಪೆ**

ಇಂತಿರ್ಪ ದ್ವಿಜನ ಗೃಹ | ಪಂಕ್ತಿಯಲಿ ಹೊರಗೆ ತಾ |
ನಿಂತು ಕೂಗಿದ ಭೂಪ | ನೆಂತೊರೆವೆನದನು || 198 ||
ಯಾರು ಒಳಗಿಹರೆನ್ನ | ಚಾರು ಸತಿಸುತರನ್ನು |
ಮಾರುವೆನು ದಿಟವೀಗ | ಭೂರಿ ಧನಕಾಗಿ || 199 ||
ಧನವಂತರಾರೆಂದು | ಧ್ವನಿಗೆಯ್ಯುತಿರೆ ಭೂಪ |
ಮನದಿ ಗ್ರಹಿಸಿದ ದ್ವಿಜನು | ಜನಪನಿವನೆಂದು || 200 ||
ಬಂದು ಹೊರಗವನ ಕರೆ | ದೆಂದ ನಿನ್ನಯ ಪತ್ನಿ |
ಕಂದರನು ಕೊಡುವುದಿದು | ಚಂದವೇನಯ್ಯ || 201 ||
ಕಾರಣವಿದೇನಿತ್ತ | ಸಾರಿ ಬಂದಿಹ ಪರಿಯ |
ಊರೆಲ್ಲಿ ಪಿತನು ನಿನ | ಗ್ಯಾರು ಪೇಳಯ್ಯ || 202 ||
ಭ್ರಷ್ಟ ನಿನ್ನಯ ಮುಖವ | ದೃಷ್ಟಿಸಲು ಬಾರದೆನೆ |
ಸೃಷ್ಟಿಪತಿ ನುಡಿದ ಕರ | ವೊಟ್ಟುಗೂಡಿಸುತ || 203 ||

**ಕೇದಾರಗೌಳ - ಅಷ್ಟ**

ಧರಣಿಯಮರ ಕೇಳು ಸಾಕೇತಪುರವರ |
ದರಸು ತ್ರಿಶಂಕುಭೂಪ ||
ತರಳನು ಹರಿಶ್ಚಂದ್ರ ವರ ಭಾನುಕುಲಜಾತ |
ಧರೆಯಾಳುತಿರಲು ಮತ್ತಾ || 204 ||
ಸತ್ಯದ ನುಡಿಗಾಗಿ ಪೃಥ್ವಿಯನೆಲ್ಲವ |
ಇತ್ತನು ಕುಶಿಕಜಗೆ ||
ಮತ್ತೆ ಸಲ್ಲುವ ಸಾಲ ಕೊಡಲೆತ್ನವಿಲ್ಲದೆ |
ಪತ್ನೀಪುತ್ರರನು ಹೀಗೆ || 205 ||
ಕೊಡುವೆ ನಾನ್ಯಾರಿಗು ಪೊಡವಿಯಮರ ನೀನು |
ಕೊಡು ಉಂಟಾದರೆ ಧನವ ||
ತಡವ ಮಾಡದೆ ಬೇಗ ನುಡಿ ನುಡಿಯೆಂದೆನೆ |
ಪೊಡವಿಪಗಿಂತೆಂದನು || 206 ||
ಧನವೆಷ್ಟ ಕೊಟ್ಟರೆ ಕೊಡುವೆ ನೀನೆನಗೀಗ |
ವನಿತೆ ಮೋಹದ ಪುತ್ರನ ||
ಎನಲಾ ಮಾತಿಗೆ ಭೂಪ ನುಡಿದನು ನಿನ್ನಯ |
ಮನದೊಳಿದ್ದಷ್ಟದನು || 207 ||
ಕೊಟ್ಟು ನೀನೀರ್ವರ ಇಟ್ಟುಕೊಳ್ಳೆನೆ ಕೇಳಿ |
ಸೃಷ್ಟಿಯಮರ ನಗುತ ||
ಕೊಟ್ಟಪೆ ನಲುವತ್ತೆಂಟು ಸಾವಿರ ಹೊನ್ನ |
ಸಿಟ್ಟು ತಾಳದಿರು ವ್ಯರ್ಥ || 208 ||

**ಭಾಮಿನಿ**

ಹರಿಕುಲಜ ಕೇಳಿಂತು ದ್ವಿಜವರ |
ನೊರೆದ ನುಡಿಗಿವನೊಪ್ಪಿ ತನ್ನಯ |
ತರಣಿತನಯರನಿತ್ತು ದ್ರವ್ಯವ ಕೊಡಲು ಭೂಸುರಗೆ ||
ಭರದಿ ಬಳಿಕಾ ದ್ರವ್ಯವನು ಮುನಿ |
ವರನ ದೂತಗೆ ಕೊಡಲು ಬಳಿಕವ |
ನೊರೆದನೊಂದನು ತರಣಿ ಕುಲಜನೊಳಾಗ ಸಂತಸದಿ || 209 ||

**ಶಂಕರಾಭರಣ - ಮಟ್ಟೆ**

ಧರಣಿಪತಿಯೆ ಕೇಳು ಎನ್ನ |
ಕರದೊಳಿತ್ತ ಧನವಿದೆಲ್ಲ |
ಬರುವ ತನ್ನ ಸಂಬಳಕ್ಕೆ | ಭರಿತವಾದುದು || 210 ||
ಎನಲು ಪೇಳ್ದ ಭೂಪನದಕೆ |
ಮುನಿಗೆ ಕೊಡುವುದಿದರ ನೀನು |
ನಿನಗೆ ಬೇರೆ ಕೊಡುವೆ ದ್ರವ್ಯ | ಎಣಿಕೆಯಿಂದಲಿ || 211 ||
ಎಲವೊ ಸಂಬಳಕ್ಕೆ ಧನವ |
ಇಳುಹಿಕೊಂಡೆನೆನಲು ಭೂಪ |
ಕಳವಳಿಸಿದ ಮನದೊಳಾಗ | ಹಲವು ತೆರದಲಿ || 212 ||
ಕೊಟ್ಟ ದ್ರವ್ಯವನ್ನು ದೂತ |
ನಿಟ್ಟುಕೊಂಡನಲ್ಲ ಋಷಿಗೆ |
ಬಟ್ಟೆಯೇನೆನುತ್ತ ನೃಪನು | ಸೃಷ್ಟಿಗೊರಗಿದ || 213 ||
ಮತ್ತೆ ಚೇತರಿಸುತ ಭೂಪ |
ಚಿತ್ತದಲ್ಲಿ ಧೈರ್ಯಗೊಂಡು |
ಸತ್ಯಗತಿಯೆಂದೆನುತಲಿರ್ದ | ಪೃಥ್ವಿಪಾಲನು || 214 ||

**ಕಾಂಭೋಜಿ - ಝಂಪೆ**

ಇತ್ತ ಕೇಳ್ ಭೂಮಿಸುರ | ವಿತ್ತವೀಯುತಲಿ ಭೂ |
ಪೋತ್ತಮನ ನಿಜ ಪತ್ನಿ ಸುತರ ||
ಪೃಥ್ವಿಯಮರನು ಕರೆದು | ತೊತ್ತೆ ಯಾಕಿಲ್ಲಿರುವೆ |
ಪುತ್ರನನು ಒಡಗೊಂಡು ನೀನು || 215 ||
ಪೋಗಿ ದಾಸಿಯರನ್ನು | ಬೇಗದಲಿ ನೀ ಕೂಡಿ |
ಸಾಗಿಪುದು ಸಕಲ ಕೆಲಸಗಳ ||
ರೋಗ ಬಂದವರಂತೆ | ನಿಂತುಕೊಂಡಿಹೆಯೇನು |
ಪೋಗು ನೀನೀಗ ತ್ವರಿತದಲಿ || 216 ||
ಧರಣಿಯಮರನ ನುಡಿಯ | ತರಳೆ ಕೇಳುತ ಮರುಗಿ |
ತರಳನನು ಕರೆದು ಪಿತನೆಡೆಗೆ ||
ತ್ವರಿತದಿಂ ಪೋಗುತ | ಪ್ರಣೆ ಕೇಳಿ ಬಾರೆನಲು |
ಭರದಿ ಬಂದೆರಗಿದನು ಪಿತಗೆ || 217 ||

**ಭಾಮಿನಿ**

ಎರಗಿ ಜನಕನೊಳೆಂದ ನಾವೀ |
ಗಿರುವೆ ದ್ವಿಜವರನಲ್ಲಿ ನೀವೆ |
ಲ್ಲೆರುವಿರೆಂಬುದ ತಿಳಿಯುತಪ್ಪಣೆ ಕೇಳಿ ಭರದಿಂದ ||
ಬರುವುದೆನ್ನುತಲೆನ್ನ ಜನನಿಯು |
ಭರದಿ ಕಳುಹಿದಳೆನಲು ಭೂಮಿಪ |
ಒರೆದ ತನ್ನಯ ಕುವರನನು ಮೈದಡವಿ ಮೋಹದಲಿ || 218 ||

**ಭೈರವಿ - ಏಕ**

ತರಳ ನಾನಿರುವೆನು ಇಲ್ಲಿ | ನೀ |
ವಿರುವುದು ಸೌಖ್ಯದೊಳಲ್ಲಿ ||
ಕರಗದೆ ಮನಸಿನಲಿ ಎನ್ನ | ಎಂ |
ದೊರೆವುದು ಜನನಿಗೆ ಮುನ್ನ || 219 ||
ಮೀರದೆ ವಚನವ ದ್ವಿಜನ | ಮಮ |
ಕಾರದೊಳಿರುತಲ್ಲ್ಯವನ ||
ಕಾರುಣ್ಯವ ಪಡೆಯುತಲಿ | ತಾ |
ಸಾರಿ ಪೇಳಿದನಳಲುತಲಿ || 220 ||
ಬಳಿಕಪ್ಪಣೆಯನು ಕೊಡಲು | ತಾಂ |
ತಳುವದೆ ತಾಯ ಪದದೊಳು ||
ಚೆಲುವನು ಮಣಿದಿಂತೆಂದ | ಕೇ |
ಳೆಳೆಯ ಪಾಲಕ ಪೇಳ್ವಂದ || 221 ||

**ಸೌರಾಷ್ಟ್ರ - ತ್ರಿವುಡೆ**

ಮಾತೆ ಲಾಲಿಸು ಹತ್ತಿರದಿ ಮಮ |
ತಾತನಿಹ ಗಡ ನಿಮ್ಮೊಳಿಂದೀ |
ರೀತಿಯೊಳಗುಸಿರೆಂದು ಪೇಳಿದ | ನೀತಿಯುತನು || 222 ||
ಎಂದುದನು ಕೇಳ್ದವಳು ತನ್ನಯ |
ಕಂದನನು ತಕ್ಕಯಿಸಿ ಘನತರ |
ದಿಂದ ಸೇವಿಸುತಿರ್ದರಲ್ಲಿಯೆ | ನೊಂದುಕೊಳುತ || 223 ||
ಒಂದು ದಿನ ಭೂಮಿಪನ ರಾಣಿಯು |
ಮಿಂದು ಬಹೆನೆನುತೆದ್ದು ಪೋಗಿಯೆ |
ಚಂದದಿಂ ಸ್ನಾನವನುಗೆಯ್ಯುತ | ಬಂದು ಬೇಗ || 224 ||
ತೊತ್ತು ಕೆಲಸವ ಗೆಯ್ಯುತಿರಲೀ |
ವರ್ತಮಾನವ ಕೇಳಿ ದ್ವಿಜವರ |
ಮತ್ತಕಾಶಿನಿಯಳನು ಕರೆಸುತ | ಮತ್ತೆ ನುಡಿದ || 225 ||

**ನಾಟಿ - ಅಷ್ಟ**

ಎತ್ತ ಪೋದೆಯೆ ಎನ್ನೊಳ್ ಪೇಳದೆ | ಇಲ್ಲಿ |
ತೊತ್ತು ಕಾರ್ಯಗಳನ್ನು ಮಾಡದೆ ||
ಇತ್ತು ಧನವ ನಿನ್ನ ಕೊಂಡೆನು | ವ್ಯರ್ಥ |
ಸುತ್ತಿ ಸುಳಿದರೀಗ ಬಿಡೆ ನಾನು || 226 ||
ನೋಡಲು ಬಲು ದಿಂಡೆಯಂತಿಹೆ | ದೊಡ್ಡ |
ರೂಢಿಪನರಸಿಯೆಂತರಿತಿಹೆ ||
ಮಾಡದಿದ್ದರೆ ತೊತ್ತು ಕಾರ್ಯವ | ಮತ್ತೆ |
ನೋಡಿಕೊ ಎಂದ ಕೋಪದೊಳವ || 227 ||
ಮಾಸಬಾರದು ಉಟ್ಟ ಸೀರೆಯು | ಹೊರ |
ಸೂಸಬಾರದು ಮೈಯೊರತೆಯು ||
ಕಾಸಿತ್ತು ನೀರುಳ್ಳ ಹೊಳೆಯನು | ತಾ |
ನೀಸಿದ ತೆರನಾಯಿತಿನ್ನೇನು || 228 ||
ಪುತ್ರನ ಗುಣವೇನ ಹೇಳಲಿ | ಎದ್ದು |
ಹೊತ್ತಾರೆ ತಿರುಗುವ ಬೀದಿಲಿ ||
ಮತ್ತಲ್ಲಿ ತಿಂಬನು ಬೇಕಷ್ಟು | ತಾ |
ನತ್ತತ್ತು ಕೇಳುವ ಮತ್ತಷ್ಟು || 229 ||
ಎಂದು ಪೇಳುತ ಮಾತೆಸುತರನ್ನು | ಬೇಗ |
ಬಂದು ತುಳಿದು ಕೋಪದಿ ತಾನು ||
ನೊಂದುಕೊಳ್ಳದೆ ಪಿಡಿದೆಳೆಯುತ್ತ | ಬಾಯೊ |
ಳೆಂದನು ಬಹುಪರಿ ಗಜರುತ್ತ || 230 ||
ತರುಣಿ ನೀನಡಿಗೆಯ ಮಾಡಿನ್ನು | ನಿನ್ನ |
ತರಳನು ಕಾಷ್ಠದ ಹೊರೆಯನ್ನು ||
ತರುವುದು ದಿನದಿನವೆನ್ನುತ | ತಾ |
ನೊರೆದಾಗ ಕಳುಹಲು ಬಳಿಕಿತ್ತ || 231 ||

**ಭಾಮಿನಿ**

ಧರಣಿಪತಿ ಹರಿಶ್ಚಂದ್ರನನು ಕರ |
ವೆರಡ ಪಿಡಿದೆಳೆತಂದು ಬಿಸಿಲೊಳ |
ಗಿರದೆ ನಿಲಿಸುತ ದೂತ ಬಳಿಕವನೆರಡು ಕಾಲುಗಳ ||
ಮುರಿದು ಹೋಗುವ ತೆರದಿ ಹೊಡೆಯಲು |
ವರ ಸಚಿವ ಕಾಣುತ್ತ ಹರ ಹರ |
ತರಣಿಕುಲಜರಿಗಾಯ್ತು ಈ ಪರಿಯೆನುತ ಚಿಂತಿಸಿದ || 232 ||

**ನೀಲಾಂಬರಿ - ರೂಪಕ**

ಭೂತಳಪತಿ ಹರಿಶ್ಚಂದ್ರನು |
ದ್ಯೂತದಿ ಸೋಲದೆ ಸತ್ಯದ |
ಮಾತನು ಸಲಹಲು ಸತಿ ತನು | ಜಾತರ ಸಹ ದ್ವಿಜಗೆ || 233 ||

ಕೊಟ್ಟನು ಮೊದಲೀ ಮುನಿಪಗೆ |
ಪಟ್ಟಣ ಧನಗಳನೆಲ್ಲವ |
ಬಿಟ್ಟನು ಕಷ್ಟವ ಮಾರ್ಗದಿ | ಸೃಷ್ಟಿಪ ತಾನಾಗಿ || 234 ||
ಹರ ಹರೇನಿತ್ತರೂ ಭೂಪಗೆ |
ಪರಿಭವ ದೊರಕಿದುದೀ ಪರಿ |
ಒರೆವುದಿನ್ಯಾರಿಗೆಂದೆನುತಲಿ | ಮರುಗಿದ ಮಂತ್ರೀಶ || 235 ||

**ಕಾಪಿ - ಅಷ್ಟ**
ಮಂತ್ರೀಶ ಕೇಳೆನ್ನ ಮಾತ | ವ್ಯರ್ಥ |
ಚಿಂತಿಸಬೇಡ ವಿಖ್ಯಾತ ||
ಸಂತು ಮುನಿಗೆ ಪೇಳ್ದ ವಚನವಿಂದಿನ ಪರಿ |
ಯಂತರ ಮುಂದಿನ್ನು ಎಂತು ಮಾಳ್ಪುದು ಪೇಳು || 236 ||
ಹದಿನೈದು ಗಳಿಗೆಯಿನ್ನಿಹುದು | ದ್ರವ್ಯ |
ಒದಗಿಸಿ ಕೊಡದಿರೆ ಮಾತು ಸುಳ್ಳಹುದು ||
ಬೆದರಿಸುವನು ದೂತ ಒದಗಿಲಿ ಕೊಡಲೆನು |
ತದರಿಂದ ಗ್ರಹಿಸದೆ ಬದಲೊಂದುಪಾಯವ || 237 ||
ಎನ್ನನೆ ಮಾರಿಕೊಳ್ಳುವೆನು | ಮೌನಿ |
ರನ್ನನ ಸಾಲವೀಯುವೆನು ||
ಎಣ್ಣಿದರೇನಹುದೆನ್ನುತಲಾಕ್ಷಣ |
ತನ್ನ ಕಾಲಿಗೆ ತೃಣವನ್ನು ಕಟ್ಟುತ ಭೂಪ || 238 ||
ಭಾರಿ ಮನೆಯ ಕಾಣುತಲಿ | ತನ್ನ |
ಮಾರಿಕೊಳ್ಳುವೆನೆನ್ನುತಲಿ ||
ಈ ರೀತಿ ಮನೆ ಮನೆ ದ್ವಾರದಿ ತಾ ನಿಂತು |
ಧಾರಿಣಿಪತಿ ಕೇಳಿ ಸಾರುವ ಮುಂದಕೆ || 239 ||

**ವಾರ್ಧಕ**
ವಾರಣಾಪುರದರಸ ಕೇಳಿಂತು ಭೂವರಂ |
ಸಾರಿ ಮುಂದೈತರಲ್ ಹೊಲಗೇರಿಯೊಳಗೊಬ್ಬ |
ವೀರಬಾಹುಕನೆಂಬ ಚಂಡಾಲನೋರುವಂ ಧನವಂತನೆನಿಸಿಕೊಂಡು ||
ಭೂರಿ ಸಂಭ್ರಮದಿಂದ ಮೆರೆದಿರಲ್ಕಾ ನೃಪನ |
ಚಾರು ಕಂಠ ಧ್ವನಿಯನಾಲಿಸಿಯೆ ಬಾಹುಕಂ |
ಘೋರನೈತಂದವಗೆ ಪೇಳ್ದ ನಿನಗೆನಿತು ಧನ ಬೇಕೆಂಬುದರುಹೆಂದನು || 240 ||

**ಪಂತುವರಾಳಿ - ಮಟ್ಟೆ**
ಎಂದ ವಚನ ಕೇಳಿ ಭೂಪ |
ತಂದುಕೊಳುತ ಧೈರ್ಯವನ್ನು |
ಚಂದದಿಂದ ಪೇಳ್ವೆನೆನ್ನು | ತೆಂದನವನೊಳು || 241 ||
ವಾರಣವನ್ನೇರಿ ಕವಡೆ |
ಹಾರಿಸೆ ಮೇಲೀಗಲದು |
ಹಾರುವಷ್ಟು ಗಾತ್ರ ಹೊನ್ನ | ವೀರ ಕೊಡುವುದು || 242 ||

ಈವೆನಷ್ಟು ಹೊನ್ನ ನಿನಗೆ |
ಸೇವೆಯೇನ ಮಾಡಲಾಪೆ |
ಕೋವಿದನೆ ಪೇಳ್ವುದೆನಲು | ಭಾವಿಸುತೆಂದ || 243 ||
ಏನ ಪೇಳ್ವರದನು ಮಾಳ್ಪೆ |
ಕಾಣಬಹುದಯ್ಯ ಗುಣವ |
ಗೋಣುಗೊಯ್ಯೆನೆನುತ ಬಲು ನಿ | ಧಾನದೊಳೆಂದ || 244 ||
ಆದರೇನ ಮಾಳ್ಪೆ ನಾನು |
ಓಡಿಪೋದರೀಗ ನೀನು |
ರೂಢಿಯೊಳಗೆ ಜನರು ಎನ್ನ | ನೋಡಿ ನಗುವರು || 245 ||
ಓಡಿಪೋಪನಲ್ಲ ಅಥವಾ |
ಓಡಿದರೆ ಜನನಿಯನ್ನು |
ಕೂಡಿದಂಥ ದೋಷವೆನಗೆ | ನೋಡು ಧನಿಕನೆ || 246 ||
ಕನಕವನ್ನು ಕೊಡಲು ವೀರ |
ಮನದೊಳೆಣಿಕೆ ಬೇಡೆನಲು |
ಕ್ಷಣದೊಳಿತ್ತನದರನಾಗ | ಮುನಿಯ ದೂತಗೆ || 247 ||
ಇತ್ತು ದೂತನೊಡನೆ ಭೂಪ |
ಮತ್ತೆ ನುಡಿದ ಪೇಳಿದವಧಿ |
ಗಿತ್ತೆ ಎರಡು ಗಳಿಗೆ ಮೊದಲು | ಚಿತ್ತವಿಸಯ್ಯ || 248 ||
ಕನಕವನ್ನು ಒಯ್ದು ಬೇಗ |
ಮುನಿಪನಿಂಗೆ ಮುಟ್ಟಿಸೆನಲು |
ವಿನಯದಿಂದ ತಂದುಕೊಟ್ಟ | ಕ್ಷಣದೊಳದರನು || 249 ||

**ಭಾಮಿನಿ**

ಪೊಡವಿಪತಿ ಕೇಳ್ ಬಳಿಕ ಬಾಹುಕ |
ನುಡಿದ ಭೂಪನೊಳಾಗ ನಿಮಿಷವು |
ತಡೆಯದೀಕ್ಷಣ ಪೋಗಿ ಸುಡುಗಾಡುಗಳ ಕಾಯ್ದಿರುತ ||
ಪೊಡವಿಯೊಳಗಿಹ ಜನರ ಶವವನು |
ಸುಡುವ ಮುಂಚಿತವಾಗಿ ಕೊಂಬುದು |
ಬಿಡದೆ ವಸ್ತ್ರವ ಹಾಗ ರೊಕ್ಕವ ಎನಗೆ ನೀಡೆಂದ || 250 ||

**ಸಾಂಗತ್ಯ - ರೂಪಕ**

ಧನಿಕ ತಾನಿಂತೆಂದ ಹೆಣನಕ್ಕಿ ತೆಗೆದಾಗ |
ವಿನಯದಿಂದಡಿಗೆಯ ಮಾಡಿ ||
ಉಣುವುದು ನೀನೆನೆ ಕೇಳುತ್ತ ಬಂದನು |
ಕ್ಷಣದಲಿ ಸುಡುಗಾಡಿನೆಡೆಗೆ || 251 ||
ಬಂದಲ್ಲಿ ಬಾಹುಕನೆಂದಂತೆ ನಡೆಸುತ್ತ |
ಲಂದು ಹೆಣನ ತಂಡುಲವನು ||
ಚಂದದಿ ಮಂತ್ರೀಶ ಗೋವಿಗೀಯುತ ಮುದ |
ದಿಂದ ಗೋಮಯದಕ್ಕಿಯನ್ನು || 252 ||

ಗೋಮೂತ್ರದಿಂದದ ತೊಳೆದಡಿಗೆಯ ಮಾಡಿ |
ಭೂಮಿಪಗೀಯಲು ಬಳಿಕ ||
ಪ್ರೇಮದಿ ಹರಿಗರ್ಪಿತವ ಮಾಡಿ ಕೊಳುವನು |
ಭೂಮಿಪಾಲಕ ದಿನದಿನದಿ || 253 ||

**ಭಾಮಿನಿ**
ಧರಣಿಪತಿ ಬಳಿಕಿತ್ತ ಲಾಲಿಸು |
ಧರಣಿಯಮರನ ಸೇವೆಯಲಿ ನೃಪ |
ತರಳನತಿ ಬಸವಳಿದು ಬಾಯಾರುತ್ತ ಚೀರುತ್ತ ||
ಸುರಿಸುತಲಿ ಕಂಬನಿಯ ತಾ ನಿಂ |
ದಿರದೆ ಬೇಗದಿ ಬಂದು ಜನನಿಯ |
ಚರಣಕಾನತನಾಗಿ ಮರುಗುತ ನುಡಿದ ವಿನಯದಲಿ || 254 ||

**ಯಮನ್ ಕಲ್ಯಾಣಿ - ಅಷ್ಟ**
ಇತ್ತ ಲಾಲಿಸಿ ಕೇಳೆನ್ನಮ್ಮಯ್ಯ | ಉರಿ |
ಹತ್ತಿತು ಕಣ್ಣಿಗೆ ಎನ್ನಯ ||
ನೆತ್ತಿಗಣ್ಣೆಯನಿಡು ಅಮ್ಮಯ್ಯ | ಹೊರೆ |
ಹೊತ್ತು ನಾ ದಣಿದೆನು ದಮ್ಮಯ್ಯ || 255 ||
ಕಾಡಿಲಿ ಬಿಸಿಲ ನಾ ತಾಳೆನು | ಮೃಗ |
ಓಡಿ ಬಪ್ಪುದು ಕಾಣುತಿನ್ನೇನು ||
ಬೇಡಿಕೊಂಡರು ಪಿಂತೆ ಪೋಗದು | ಧ್ವನಿ |
ಮಾಡಿಯೆ ಮೈ ಮೇಲೆ ಬೀಳ್ವುದು || 256 ||
ದಾರಿಯು ಸಮವಿಲ್ಲ ನಡೆದರೆ | ಇಕ್ಕೊ |
ಜಾರಿ ಬಿದ್ದುದ ನೋಡು ಕಣ್ಣಾರೆ ||
ಮೋರೆಯೊಳಿದೆ ಗಾಯವದರಿಂದ | ನೋವ |
ಯಾರಿಗೆಂಬೆನುತಲಿ ಮತ್ತೆಂದ || 257 ||
ಒಟ್ಟೊಡಗೂಡಿ ಪೋದವರೆಲ್ಲ | ಎನ್ನ |
ಬಿಟ್ಟು ಬರುವರು ತಪ್ಪಿಸುತೆಲ್ಲ ||
ಬಟ್ಟೆಗಾಣದೆ ಬಲು ಬಳಲುತ್ತ | ಕಂ |
ಗೆಟ್ಟೆನು ಕೇಳ್ ತಿರು  ತಿರುಗುತ್ತ || 258 ||

**ಭಾಮಿನಿ**
ಧರಣಿಪತಿ ಕೇಳಿಂತು ತರಳನು |
ಮರುಗುತಿರೆ ನಿಜ ಜನನಿ ಕಾಣುತ |
ಹರ ಹರಾ ಹರಯೆನುತ ತಾನತಿ ಮರುಗುತೇಳುತ್ತ ||
ತರಣಿಕುಲಜನ ಪುತ್ರನಿಂಗೀ |
ಪರಿಭವವು ಪ್ರಾಪ್ತಿಸಿತೆಯೆನ್ನುತ |
ತರುಣಿಮಣಿ ತನುಜನನು ಮನ್ನಿಸುತೆಂದಳನುನಯದಿ || 259 ||

**ನಾಟಿ - ಅಷ್ಟ**

ಚಿಣ್ಣ ನೀನಳದಿರು ಬಹು ಪರಿ | ವ್ಯರ್ಥ |
ಎಣ್ಣಿಸುತೆಣ್ಣಿಸುತೀ ಪರಿ ||
ಪುಣ್ಯ ಹೀನರುಗಳು ನಾವಿಂದು | ಎಂದು |
ಕಣ್ಣಾರೆ ನೋಡಿದೆ ನೀನಿಂದು || 260 ||
ಕಷ್ಟವೆಂದರೆ ಕೇಳ್ವರಾರಯ್ಯ | ನಾವು |
ಬಿಟ್ಟು ಪೋಪುದು ನೀತಿಯೇನಯ್ಯ ||
ಕೊಟ್ಟು ಬಿಡುವರುಂಟೆ ಸಾಲವ | ಹರಿ |
ಕೊಟ್ಟುದನೆಲ್ಲವನುಣ್ಣುವ || 261 ||
ಒಡೆಯಗೆನ್ನುವರುಂಟೆ ಕಷ್ಟವ | ಪೇಳೆ |
ಒಡನೆ ಗದರಿಸುವನೆದ್ದವ ||
ಬಿಡು ಬಿಡು ಶೋಕವನೆನುತಲಿ | ಮಾತೆ |
ಒಡಬಡಿಸಿದಳತಿ ನಯದಲಿ || 262 ||

**ದ್ವಿಪದಿ**

ಧರಣಿಪತಿ ಕೇಳಿಂತು ತರಳನನು ಮಾತೆ |
ಹರುಷದಲಿ ಮನ್ನಿಸಿಯೆ ಬಳಿಕ ವಿಖ್ಯಾತೆ || 263 ||
ಮೊದಲಿನಂದದಿ ಗೃಹದ ಕಾರ್ಯಗಳ ನಡೆಸಿ |
ಬದಲೊಂದ ಯೋಚಿಸದೆ ಹರಿಶ್ಚಂದ್ರನರಸಿ || 264 ||
ಇರುತಿರ್ದಳೆಂದಿನಂದದಿ ಕುವರ ತಾನು |
ಹೊರಟು ಕಾಡಿಗೆ ಬೇಗ ತಾಯ ಮೊಗವನ್ನು || 265 ||
ತಿರುತಿರುಗಿ ನೋಡುತ್ತ ಮತ್ತಲ್ಲಿ ನಿಲುತ |
ಮರುಗಬೇಡಮ್ಮಮ್ಮ ಎಂದು ಪೇಳುತ್ತ || 266 ||
ನಡೆನಡೆದು ಮುಂದೈದಿ ಬಂದು ಕಾನನಕೆ |
ತಡೆಯದಲ್ಲಿಯೆ ಕಂಡ ಮರನೊಂದನದಕೆ || 267 ||
ಏರಿ ಕಾಷ್ಠವ ಮುರಿಯುತಿರಲಾಗಲವನು |
ಜಾರಿ ಬಿದ್ದನು ಧರೆಗೆ ಕೂಡೆ ಬಾಲಕನು || 268 ||
ಅಮ್ಮ ಹಾ ಎನ್ನಮ್ಮ ಅಮ್ಮ ಎಂದೆನುತ |
ಒಮ್ಮೊಮ್ಮೆ ತಲೆಯೆತ್ತಿ ನೋಡಿ ಮಲಗುತ್ತ || 269 ||

**ಭಾಮಿನಿ**

ಎಲೆ ಪರೀಕ್ಷಿತತನಯ ಕೇಳೈ |
ಹಲವು ಪರಿಯಲಿ ಬಾಲ ತಾಯನು |
ಇಳೆಯೊಳುಳ್ಳ ಸಮಸ್ತ ಪ್ರಾಣಿಯು ಮರುಗುವಂದದಲಿ ||
ನಿಲದೆ ಕರೆದವ ಸಲಲು ಮೂರ್ಛೆಗೆ |
ಬಳಿಕ ಸಂಗಡ ಪೋದ ಬಾಲರು |
ತಳುವದಾ ಕ್ಷಣ ಜನನಿಗರುಹಿಯೆ ಪೋದರವರಂದು || 270 ||

**ಕಂದ ಪದ್ಯ**

ಎಂದಾ ಬಾಲರ ನುಡಿಯಂ |
ಚಂದಿರಮುಖಿ ಕೇಳುತ ಶೋಕದಿ ದ್ವಿಜನೆಡೆಗಂ ||
ಬಂದಾ ಕ್ಷಣದೊಳ್ ಸತಿ ತಾ |
ನೆಂದಳು ಬಾಲನ ಪರಿಯಂ ದೈನ್ಯದೊಳಾಗಂ || 271 ||

**ದ್ವಿಪದಿ**

ಪೊಡವಿಯಮರನೆ ಕೇಳು ಎನ್ನ ಬಾಲಕನು |
ಮಡಿದನೆಂಬುದನೀಗ ಕೇಳಿದೆನು ನಾನು ||
ತಡೆಯದಡವಿಗೆ ಪೋಗಿ ಮರನೇರಿ ಕೆಳಗೆ |
ಒಡನೆ ಬೀಳುತ ಹರಣ ಕಳೆದನಂತವಗೆ || 272 ||
ಯಾರು ಕೇಳುವರಿಲ್ಲ ಪೊರೆದ ನಿಜ ಜನಕ |
ಸಾರಿದನೊ ತಾನೆತ್ತ ಕಾಣೆನೀ ತನಕ ||
ನಾರಿ ನಾನಾಗಿರ್ದು ಗೆಯ್ವೆನೇನುವನು |
ತೋರಿಸೈ ಬೇಗ ತನಗೊಂದುಪಾಯವನು || 273 ||
ನೋಡಿ ಬಹೆ ಬಾಲಕನ ಒಮ್ಮೆ ಕಣ್ಣಿನಲಿ |
ನೀಡಿರಪ್ಪಣೆಯನ್ನು ಜವದಿ ಇಂದಿನಲಿ ||
ರೂಢಿಯೊಳು ಕಡು ಕಷ್ಟವೆಲ್ಲರಿಗು ಸಮವು |
ಮಾಡು ಕರುಣವನೆನಲು ನುಡಿದ ದ್ವಿಜವರನು || 274 ||

**ಭಾಮಿನಿ**

ಎಷ್ಟು ನುಡಿದರು ಕೇಳೆ ನೀನೆಲೆ |
ದಿಟ್ಟೆ ಹೆಂಗಸು ಪಾಕಗಳ ಮಾ |
ಡಿಟ್ಟು ನಿಶಿಯಲಿ ಪೋಪುದಾದರೆ ಪೋಗು ನೀನೆನುತ ||
ಸಿಟ್ಟು ಮಾಡುತ ನುಡಿಯೆ ಬಾಲಕಿ |
ಬಟ್ಟೆ ಬೇರಿಲ್ಲೆನುತ ಪಾಕವ |
ತಟ್ಟನೊದಗಿಸಿ ರಾತ್ರಿಯಲಿ ಬರುತಿರ್ದಳಾ ಸ್ಥಳಕೆ || 275 ||

**ಭೈರವಿ - ಏಕ**

ಕತ್ತಲೆಯೊಳು ನೃಪನರಸಿ | ಪಥ |
ವೆತ್ತಲೆನುತ ತಾನರಸಿ ||
ಪುತ್ರ ತಾನೆಲ್ಲಿಹನೆನುತ | ಮರು |
ಗುತ್ತಲಿ ಪೋದಳು ಮತ್ತ || 276 ||
ಅಡವಿಯನೆಲ್ಲವ ಪುಡುಕಿ | ಗಿಡ |
ಮರಗಳ ಗುಂಪನು ಸಿಲುಕಿ ||
ಕಡೆಗೆ ಕಂಡಳು ಮರದಡಿಯ | ಬಿದ್ದು |
ಮಡಿದ ಬಾಲನ ದುಃಸ್ಥಿತಿಯ || 277 ||

ಸುರಿವ ರಕ್ತದ ಧಾರೆಯಲಿ |ನೆಲ |
ಕುರುಳಿ ಬಿದ್ದಿಹ ಗಾಯದಲಿ ||
ಹರ ಹರ ಎನ್ನುತ ಮಾತೆ | ತನ್ನ |
ತರಳನ ಕಾಣುತ ಪ್ರೀತೆ || 278 ||
ಎತ್ತಿ ತೊಡೆಯೊಳು ಕುಳ್ಳಿರಿಸಿ | ತನ್ನ |
ಚಿತ್ತದಿ ಬಲುತರ ಎಣಿಸಿ ||
ಮುತ್ತನಿಡುತ ಬಾಲಕಗೆ | ಹಲು |
ಬುತ್ತಲಿರ್ದಳು ತಾ ಕಡೆಗೆ || 279 ||

**ನೀಲಾಂಬರಿ - ಏಕ**

ಸುತನೆ ನೀ ಮಡಿದೆಯಲ್ಲ | ಎನಗೆ ಮುಂದೆ |
ಗತಿಯೇನು ಪೇಳು ಸೊಲ್ಲ ||
ಪಿತನು ಬಿಟ್ಟೆಮ್ಮನಗಲಿ | ಪೋದನಲ್ಲಯ್ಯೋ |
ಪಥವೇನು ಪೇಳಿಂದಿಲಿ || 280 ||
ತಾಳಿದ ಕಷ್ಟವನ್ನು | ನಿನ್ನನು ನೋಡಿ |
ಬಾಲ ನಾ ಮರೆದೆ ಇನ್ನು ||
ಮೇಲಿನ ಶೋಕವನ್ನು | ಮರೆಯಲೆಂತು |
ಪೇಳಯ್ಯ ಎನಗದನು || 281 ||
ಒಂದು ದಿವಸವಾದರೂ | ಸುಖವೆಂಬುದಿಲ್ಲ |
ಕಂದನೆ ಮುಂದಾದರೂ ||
ಚಂದದೊಳಿಹೆನೆನ್ನುತ | ಗ್ರಹಿಸಿದೆ ನಾನು |
ಇಂದು ಮಡಿದೆಯ ಜಾತ || 282 ||
ತರಣಿ ವಂಶದಲಿ ಪುಟ್ಟಿ | ಮಿಕ್ಕುಳಿದಂಥ |
ಧರಣಿಪರೆದೆಯ ಮೆಟ್ಟಿ ||
ಧರೆಯಾಳ್ವ ಹರಿಶ್ಚಂದ್ರಗೆ | ಪುತ್ರನೆಂದೆನಿಸೀ |
ಪರಿಯಾಯ್ತೆ ಮಗು ನಿನಗೆ || 283 ||
ಕರೆದು ಕರೆದು ಎನ್ನನು | ಮರುಗಿದೆಯೇನೈ |
ಸುರಿಸಿ ಕಣ್ಣಲಗಳನು ||
ಹರಣ ಬಿಡುವ ವೇಳ್ಯದಿ | ಪೇಳಯ್ಯ ಕಂದ |
ಕೊರಗಿದೆಯೈ ನಿಜದಿ || 284 ||
ಪೇಳುವುದ್ಯಾರಿಗಿನ್ನು | ಪೇಳ್ದರೆ ದೂರ |
ಕೇಳ್ವರುಂಟೇ ಇದನು ||
ಹಾ ಹಾ ಪುತ್ರನೆ ಎನ್ನುತ | ಮೂರ್ಛೆಯ ತಾಳಿ |
ಬಾಲೆಯು ಬಿದ್ದಳುತ || 285 ||

**ಭಾಮಿನಿ**
ಧರಣಿಪತಿ ಕೇಳ್ ಬಳಿಕ ಭೂಪನ |
ತರುಣಿ ಎಚ್ಚೆತ್ತೆದ್ದು ನಾನೀ |
ಪರಿಯೊಳತ್ತರೆ ಕೇಳ್ವರುಂಟೇ ಇನ್ನು ಬಾಲಕನ ||
ಭರದಿ ಕೊಂಡೊಯ್ದೀಗ ಸುಡುವೆನು |
ವರ ಶ್ಮಶಾನದೊಳೆನುತಲಾ ಕ್ಷಣ |
ತರಳೆ ತಾನೇ ಶವವ ಹೊತ್ತೈತಂದಳಿರುಳಿನಲಿ || 286 ||

**ಸೌರಾಷ್ಟ್ರ - ತ್ರಿವುಡೆ**
ಹರಿಕುಲಜ ಕೇಳೀ ಪರಿಯೊಳಾ |
ತರಳೆ ಬರುತಿರೆ ಮುಂದೆ ಮಾರ್ಗದಿ |
ಪರಮಮುನಿ ಕೌಶಿಕನು ಕಪಟದಿ | ಭರದೊಳಾಗ || 287 ||
ಭೂತ ಯಕ್ಷಿ ಪಿಶಾಚಿಗಳು ಜನ |
ಜಾತ ಒಯ್ಯುವ ಬ್ರಹ್ಮರಾಕ್ಷಸ |
ಭೀತಿಬಡಿಸುವ ಶಾಕಿನಿಯು ಸಹ | ತಾ ತಡೆಯದೆ || 288 ||
ಬಂದು ಮುತ್ತಿತು ಹೆಣನ ಕೊಡು ಕೊಡು |
ಎಂದು ಎಳೆಯುತ ಸತಿಯ ಬಹು ಪರಿ |
ಯಿಂದ ಭಂಗಿಸುತಿರಲು ಕಂಡಾ | ಮಂದಗಮನೆ || 289 ||
ಓಂ ನಮಃ ಶಿವನೆಂದು ಹರ ಓಂ |
ಓಂ ನಮೋ ಭವನೆಂದು ಸ್ಮರಿಸಲು |
ತನ್ನಿಂತಾನೇ ಮಾಯವಾದುದು | ಕನ್ನೆ ಕಣ್ಗೆ || 290 ||
ಚಂದ್ರಮತಿ ಬಳಿಕಾಗ ತನ್ನಯ |
ಕಂದನನು ಪಿಡಿದೊಯ್ದು ಹೊಂದಿದ |
ಳಂದು ಸುಡುಗಾಡನ್ನು ಕೇಳೈ | ಇಂದುಕುಲಜ || 291 ||

**ಭಾಮಿನಿ**
ತರುಣಿ ಬಳಿಕಾ ವರ ಸ್ಮಶಾನದೊ |
ಳಿರುವ ಒಣಕಾಷ್ಠಗಳನೆಲ್ಲವ |
ಭರದಿ ಒಟ್ಟೊಡಗೂಡಿಸುತ ಶವವದರ ಮೇಲಿರಿಸಿ ||
ಮರುಗುತಲಿ ಉರಿಗೊಳಿಸಲಾಕ್ಷಣ |
ಅರರೆ ಇವಳ್ಯಾರೀಗ ಶವವನು |
ಒರೆಯದೆನ್ನೊಳು ಸುಡುವುದೆನುತೈತಂದ ಕಾವಲಿಗ || 292 ||

**ಶಂಕರಾಭರಣ - ಮಟ್ಟೆ**
ಯಾರೆ ಹೆಂಗುಸೆಲೆಲೆ ದಿಟ್ಟೆ |
ಚೋರರಂತೆ ಬಂದು ಶವವ |
ಏರಿಸುತ್ತ ಅನಲನಿಂಗೆ | ಸೂರೆ ಮಾಳ್ಪೆಯ || 293 ||
ಸುಡಲು ಬಿಡೆನು ಎನುತ ಶವವ |
ಪಿಡಿದು ದೂರ ಬಿಸುಡೆ ಕಂಡು |
ಜಡಜನೇತ್ರೆ ನುಡಿದಳಾಗ | ಬಿಡದೆ ಮರುಗುತ || 294 ||

ತರಳನೀತನೆನಗೆ ನಿನ್ನ |
ತರಳನೆನುತ ಯೋಚಿಸುತ್ತ |
ಕರುಣಿಸಪ್ಪಣೆಯನು ಶವವ | ಉರಿಯಗೊಳಿಪಡೆ || 295 ||
ವನಿತೆ ಕೇಳು ಸುಡುವಡೀಗ |
ಹೆಣನ ವಸ್ತ್ರ ಹಾಗ ರೊಕ್ಕ |
ವಿನಯದಿಂದ ಕೊಟ್ಟು ಮತ್ತೆ | ಹಣೆಯ ತಂಡುಲ || 296 ||
ಕೊಟ್ಟರೀಗ ಶವವ ಸುಡಲು |
ಬಿಟ್ಟುಬಿಡುವೆನೆಂದೆನುತ್ತ |
ಘಟ್ಟನುಸಿರೆ ಬಾಲೆ ಬಾಯ | ಬಿಟ್ಟು ಪೇಳ್ದಳು || 297 ||

**ಕೇದಾರಗೌಳ - ಅಷ್ಟ**

ಎಲವೊ ನಾನ್ಯಾರೆಂದು ತಿಳಿಯದೆ ಈ ಪರಿ |
ಗಳಹುವೆ ಏಕೆ ನೀನು ||
ಇಳೆಯ ವಲ್ಲಭ ಹರಿಶ್ಚಂದ್ರನ ಸತಿ ನಾನು |
ಬಳಿಕೀತ ಮಗನವಗೆ || 298 ||
ಸತ್ಯಕೋಸುಗ ಭೂಮಿಯನ್ನೆಲ್ಲಾ ಮುನಿಪಗೆ |
ಇತ್ತು ಭೂಮಿಪ ನಮ್ಮನು ||
ವಿತ್ತಕೋಸುಗ ಕೊಟ್ಟ ಕೌಶಿಕನೆಂಬ ದ್ವಿಜ |
ಜೋತ್ತಮಗೆಮ್ಮನು || 299 ||
ಇರಲಲ್ಲಿ ಎನ್ನಯ ತರಳನು ಕಾಷ್ಠವ |
ಮುರಿವರೆ ಹೋದಲ್ಲಿಯೆ ||
ಮರದಿಂದ ತಾ ಬಿದ್ದು ಹರಣ ಬಿಟ್ಟುದರಿಂದ |
ಭರದಿ ಬಂದೆನು ಇಲ್ಲಿಗೆ || 300 ||
ನಿಮಿಷದಿ ಶವವನ್ನು ದಹನಗೆಯ್ಯುವಡಿಂದು |
ಕ್ರಮದೊಳಪ್ಪಣೆ ಈವುದು ||
ಗಮಿಸದಿರೊಡೆಯನಿದ್ದಲ್ಲಿಗೆ ಬೇಗದಿ |
ಸಮವಲ್ಲ ದಣಿಸುವುದು || 301 ||

**ಭಾಮಿನಿ**

ಎಂದ ಮಾತನು ಕೇಳಿ ಭೂಮಿಪ |
ನೆಂದನೆಲೆ ನಿನ್ನೆಲ್ಲ ಪರಿಯನು |
ಇಂದು ಎನ್ನೊಡನಾಡಿದರು ಈ ಶವವ ದಹಿಸುವಡೆ ||
ತಂದುಕೊಡು ಹೆಣನೊಸ್ತ್ರರೊಕ್ಕವ |
ಮಂದಗಮನೆಯೆ ಬಿಡುವೆನಕ್ಕಿಯ |
ನೆಂದೆನಲು ಕೇಳುತ್ತ ನುಡಿದಳು ಬಾಲೆ ವಿನಯದಲಿ || 302 ||

**ಕಾಂಭೋಜಿ - ಝಂಪೆ**

ಸುಡುಗಾಡಿನೊಡೆಯ ಕೇಳ್ | ನೀ ಪೇಳಿದಷ್ಟು ನಾ |
ಕೊಡುವೆನೆಂದರೆ ಕೈಯೊಳಿಲ್ಲ ||
ಕಡನ ನಂಬುವರಿಲ್ಲ | ಗುರುತರಿಯರು ಮತ್ತೀ |
ಪೊಡವಿಯೊಳಗಿಹ ಜನರು ಎನ್ನ || 303 ||
ನೀನೆ ಯತ್ನವ ನಡೆಸ | ಬೇಕೆನಲು ಕೇಳ್ದಾಗ |
ಮಾನಿನಿಯೊಳೆಂದನವ ನಗುತ ||
ಕಾಣೆ ನಾನಿದಕುಪಾ | ಯವನಾದಡೀ ಕ್ಷಣದಿ |
ಸಾನುರಾಗದಿ ಒಡೆಯನೆಡೆಗೆ || 304 ||
ಪೋಗಿ ಕೇಳಿಯೆ ಬರುವೆ | ನೆಂದೆನುತ ಸಾಗಲಾ |
ನಾಗವೇಣಿಯು ಶವವನಿಟ್ಟು ||
ನಾಗಶಯನನ ಪದವ |ಸ್ಮರಿಸಿಕೊಂಡಿರ್ದಳೈ |
ಬೇಗದಲಿ ದುಗುಡ ತಾ ಬಿಟ್ಟು || 305 ||

**ವಾರ್ಧಕ**

ಪೃಥ್ವಿಪತಿ ಕೇಳಿತ್ತ ಪರಮಮುನಿ ಕೌಶಿಕಂ |
ಚಿತ್ತದೊಳು ಧ್ಯಾನಿಸಿದನಿನ್ನೊಂದುಪಾಯದಿಂ |
ಮಿತ್ರಕುಲದವನಿಪನ ಸತ್ಯಮಂ ಶೋಧಿಸುವೆನೆನುತ ಬಂದಾ ಕಾಶಿಗೆ ||
ಮತ್ತಲ್ಲಿ ಸುಡುಗಾಡಿನೊಳಗಿರುವ ಭೂಮಿಪನ |
ಪತ್ನಿಯಂ ಮೂರ್ಛೆಗೊಳಿಸುತ ಮಡದಿ ಬಾಲಕನ |
ಹತ್ತು ಚೂರಂ ಮಾಡಿ ಬಾಯ್ಗಿರಿಸಿ ವರ ಮಹಾ ಮೃತ್ಯುರೂಪವ ಗೆಯ್ದನು || 306 ||

**ಸೌರಾಷ್ಟ್ರ - ತ್ರಿವುಡೆ**

ಬಳಿಕ ಕಾಶೀಪುರವರನ ವರ |
ಚೆಲುವ ಮಗುವನು ತರಿದು ಮುನಿಪತಿ |
ಲಲನೆಯಳ ಕರಕಿತ್ತು ಮತ್ತಾ | ಪೊಳಲೊಳಲ್ಲಿ || 307 ||
ಹುಡುಕಿದರು ಬಾಲಕನ ಸರ್ವರು |
ಎಡೆಬಿಡದೆ ಬಳಿಕ್ಯಾರ ಕೇಳ್ವರು |
ಒಡನೆ ನುಡಿದರು ಕಾಣೆವೆಂದಾ | ಹುಡುಗನನ್ನು || 308 ||
ಧರಣಿಪತಿ ಕೇಳಾಗ ಕುಶಿಕಜ |
ಧರಿಸುತಲಿ ಕೊರವಂಜೆ ರೂಪವ |
ಭರದಿ ಪೊಕ್ಕನು ರಾಜಭವನವ | ಹರುಷದಿಂದ || 309 ||
ನೆರೆತ ಕೂದಲು ನಡುಗುವವಯವ |
ಕರದೊಳೂರುವ ಕೋಲ ಕಂಕುಳ |
ಲಿರುವ ಹಡಪದ ತರುಣಿಯನು ಕಂ | ಡಿರದೆ ಭೂಪ || 310 ||
ಕರೆಸಿ ನುಡಿದನು ತರುಣಿ ನೀನೆಮ |
ಗೊರೆಯಬೇಹುದು ಪ್ರಶ್ನೆಯೊಂದನು |
ಪರಿಪರಿಯ ಧನ ಕನಕ ಕೊಡುವೆನು | ಭರದೊಳೆನಲು || 311 ||

ಅಷ್ಟದಿಕ್ಪಾಲಕರಿಗೊಂದಿಸಿ |
ಇಷ್ಟ ದೇವತೆಯನ್ನು ಬೇಡುತ |
ಥಟ್ಟನೆಂದಳು ಪ್ರಶ್ನೆಯನು ವರ | ಸೃಷ್ಟಿಪತಿಗೆ || 312 ||

**ಕೇದಾರಗೌಳ - ಅಷ್ಟ**

ಮೇಷ ವೃಷಭ ವರ ಮಿಥುನ ಕರ್ಕಾಟಕ |
ರಾಶಿಯು ಸಿಂಹ ಕನ್ಯೆ ||
ಲೇಸಿನೊಳ್ ಗುಣಿಸಿದೆ ತುಲ ವೃಶ್ಚಿಕ ಪೃ |
ಥ್ವೀಶನೆ ಕೇಳು ನೀನು || 313 ||
ಧನುವು ಮಕರ ಕುಂಭ ಮೀನವೆಂಬುದು ಸಹ |
ವಿನಯದಿ ಗುಣಿಸಲಾಗ ||
ಜನಪತಿ ಕಂಡುದ ಪೇಳುವೆ ನಿನ್ನೊಳು |
ಘನತರ ಪ್ರಶ್ನೆ ಬೇಗ || 314 ||
ಕಾಣಿಕೆಯಿಟ್ಟು ರಾಶಿಯ ನೋಡೆ ನಿನ್ನಯ |
ಸೂನು ಕಾಣದರಿಂದಲಿ ||
ಸಾನುರಾಗದಿ ಕೇಳ್ವುದದರಿಂದ ಪೇಳ್ವೆನು |
ಜಾಣನೆ ಸಂತಸದಿ || 315 ||
ಧಾರಿಣಿಯೊಳು ದೊಡ್ಡ ಮಾರಿಯು ತಾ ಬಂದು |
ಊರೆಲ್ಲ ಸುಳಿಯುವುದು ||
ಧಾರಿಣೀಪತಿಯೆ ಆಹಾರವ ಗೊಂಡಿತು |
ಚಾರು ಬಾಲಕನೋರ್ವನ || 316 ||
ಇಂದು ಶ್ಮಶಾನವ ಸೇರಿತು ನಿನ್ನಯ |
ಕಂದನ ಮುರಿಯುತಿನ್ನು ||
ಮುಂದೆ ಊರೊಳಗಿಪ್ಪ ಜನರನು ಕೊಲುವುದು |
ಸಂದೇಹವಿಲ್ಲದಕೆ || 317 ||
ಕೊರವಂಜಿಯಿಂತೆಂದ ನುಡಿಯನು ಕೇಳುತ |
ಧರಣಿಪನಿದಕೆ ಮುಂದೆ ||
ಪರಿಹಾರವೇನೆಂದು ಕೇಳಲು ವರ ವೃದ್ಧ |
ತರುಣಿಯು ಮಗುಳೆಂದಳು || 318 ||

**ಭಾಮಿನಿ**

ಧರಣಿಪತಿ ಕೇಳೀ ಸ್ಮಶಾನದೊ |
ಳಿರುವ ಮಾರಿಯ ಶಿರವನಲ್ಲಿಯೆ |
ಇರುವ ಕಾವಲುಗಾರನಿಂದಲಿ ಪರಿಹರಿಸೆ ಮುಂದೆ ||
ಪರಿಕಿಸಲು ಭಯವಿಲ್ಲ ರಾಜ್ಯಕೆ |
ಒರೆದ ತೆರದಲಿ ಮಾಡಿಸೆಂದೆನೆ |
ಬರೆದನಾಕ್ಷಣ ಲಿಖಿತವನು ವರ ವೀರಬಾಹುಕಗೆ || 319 ||

**ಕಂದ ಪದ್ಯ**
ಬರೆದಾ ಲಿಖಿತವ ಬೇಗದಿ |
ಚರರೊಡನೀಯಲ್ಕಾತಂ ತ್ವರಿತದೊಳಾಗಳ್ ||
ವರ ಬಾಹುಕನೆಡೆಗಯ್ದಿಯೆ |
ಹರುಷದಿ ಕೊಡಲವನದ ವಾಚಿಸಿದಂ ಮುದದೊಳ್ || 320 ||

**ಕಾಂಭೋಜಿ - ಝಂಪೆ**
ಸುಡುಗಾಡಿನೊಡೆಯನಹ ವೀರಬಾಹುಕನಿಂಗೆ |
ಪೊಡವಿಪತಿ ಬರೆದಂಥ ಲಿಖಿತ ||
ಕಡು ಕ್ರೂರ ಮಾರಿಯು ಸ್ಮಶಾನದೊಳಿಹುದೆನುತ |
ನುಡಿದಳಿಂದಿನಲಿ ಕೊರವಂಜಿ || 321 ||
ಚಿಣ್ಣರೀರ್ವರ ಬಿಡದೆ ಭಕ್ಷಿಸುತ ಮುಂದಿನ್ನು |
ಎನ್ನ ರಾಜ್ಯದ ಜನರೆಲ್ಲ ||
ನಿರ್ಣಯವು ಕೊಲ್ಲುವುದು ಎನುತ ಪೇಳ್ದುದರಿಂದ |
ನಿನ್ನೆಡೆಗೆ ಬರೆದು ಕಳುಹಿದೆನು || 322 ||
ಕಂಡಾಕ್ಷಣದೊಳದು ಸ್ಮಶಾನವನು ನೆರೆಕಾಯ್ದು |
ಕೊಂಡಿರ್ಪನಿಂದ ಮಾರಿಯಳ ||
ಮಂಡೆಯನು ಹೊಯ್ಯುವುದು ಎಂದೆನುತ ಬರೆದುದನು |
ಕಂಡನಾ ಚಂಡಾಲನಂದು || 323 ||
ಮತ್ತಲ್ಲಿ ನೋಡಿದನು ಸುಡುಗಾಡ ಕಾವಲಿಹ |
ಪೃಥ್ವಿಪನ ಕರೆಯುತಲ್ಲಿರುವ ||
ಮೃತ್ಯುರೂಪವ ಪೋಲ್ವ ಮಾರಿಯನು ತಲೆಗಡಿದು |
ಪೃಥ್ವಿಗೊರಗಿಪುದು ಬೇಗದಲಿ || 324 ||
ತಡೆಯದೀಕ್ಷಣ ಪೋಗು ಪೋಗೆಂದು ನುಡಿಯಲ್ಕೆ |
ಒಡನೆದ್ದು ಬಂದ ಬೇಗದಲಿ ||
ಒಡೆಯ ಪೇಳ್ದಿಹ ಮಾರಿಯೆಲ್ಲೆಂದು ಪುಡುಕುತ್ತ |
ಕಡೆಗೆ ಕಂಡನು ತನ್ನ ಸತಿಯ || 325 ||

**ಭಾಮಿನಿ**
ಹರನೆ ಎನ್ನಯ ತರುಣಿಯಳ ಶಿರ |
ವರಿಯೆ ಪೇಳ್ದನು ಒಡೆಯನೆನ್ನೊಳು |
ಮೆರೆವ ಮಾರಿಯಿದೆಂದು ಪೇಳ್ದವರ್ಯಾರೊ ಭೂಮಿಪಗೆ ||
ಸರಸಿಜೋದ್ಭವ ಎನ್ನ ಪಣೆಯೊಳು |
ಬರೆದನೀ ತಾನಿನಿತನೆಂದೆನು |
ತಿರದೆ ಮರುಗುತಲಿರ್ದ ಭೂಮಿಪ ಧರೆಗೆ ಹಮ್ಮೈಸಿ || 326 ||

**ತೋಡಿ - ಏಕ**
ಏನ ಮಾಡಲಯ್ಯೊ ಶಿವನೆ | ಖಡುಗದಿಂದಾ ಸತಿಯ ||
ತಾನೆ ಕಡಿಯಲೆಂತು ಕರುಣ | ಹೀನನಾಗಿ ತಲೆಯ || 327 ||

ಧರಣಿಯಮರಗಿತ್ತು ಭಂಗ | ಪಡಿಸಿದೆ ನಾ ಮೊದಲೆ ||
ತರುಣಿಯನ್ನು ದಣಿಸಿದೆನು | ಕರುಣದೋರದಿನ್ನು || 328 ||
ಸತ್ತ ಬಾಲನನ್ನು ತಾನೆ | ಹೊತ್ತು ಬಲು ದಣಿದು ||
ಕತ್ತಲೆಯೊಳು ಬಂದಳಿಲ್ಲಿ | ಅತ್ತು ಎನ್ನ ಕರೆದು || 329 ||
ಮಡದಿಯೆಂದು ಕಡಿಯದಿರಲು | ಒಡೆಯನಾಜ್ಞೆಯನ್ನು ||
ಕೆಡಿಸಿದಂಥ ಪಾಪಿಯಾದೆ | ಕಡಿದೆನಾದರಿನ್ನು || 330 ||
ಕ್ಷಿತಿಯೊಳು ಬರುವುದು ಸ್ತ್ರೀ | ಹತ್ಯ ದೋಷವೆನುತ ||
ಪೃಥ್ವಿನಾಥ ಖಡುಗವನ್ನು ಎತ್ತುತೆಂದ ಮಾತ || 331 ||
ಪತ್ನಿಯಾಸೆಗೆಯ್ದರೆನ್ನ | ಸತ್ಯ ಕೆಡುವುದೆನುತ ||
ಪೃಥ್ವಿನಾಥ ಖಡ್ಗವನ್ನು | ಎತ್ತುತೆಂದ ಮಾತ || 332 ||

**ಸಾಂಗತ್ಯ - ರೂಪಕ**

ಹರಿಯೆ ಶ್ರೀಹರನೆ ಹೇ ಸರಸಿಜೋದ್ಭವ ಮುಖ್ಯ |
ವರ ತ್ರಿಮೂರ್ತಿಗಳೆನ್ನನಿಂದು ||
ಕರುಣದಿ ಸಲಹಲಿ ಕಡಿವೆನು ತರಳೆಯ |
ಪೊರೆದ ದಾತನ ನುಡಿಗಾಗಿ || 333 ||
ಅಷ್ಟದಿಕ್ಪಾಲರು ಕೇಳ್ವುದು ಎನ್ನಯ |
ಪಟ್ಟದರಸಿ ಚಂದ್ರಮತಿಯ ||
ಕುಟ್ಟುವೆ ಶಿರವನು ಒಡೆಯನೆಂದುದರಿಂದ |
ಒಟ್ಟಾಗಿ ಪೊರೆವುದು ಎನ್ನ || 334 ||
ಮುನಿವರರೆಲ್ಲರು ಕೇಳಿರಿ ಎನ್ನಯ |
ವನಿತೆಯ ಶಿರವರಿಯುವೆನು ||
ವಿನಯದಿ ಬಂದೆಲ್ಲ ಪೊರೆವುದೆಂದೆನುತಲಿ |
ಜನಪತಿ ನಡೆದ ಮುಂಬರಿದು || 335 ||
ನುಡಿದಿಹೆ ಮೊದಲಿಂಗೆ ಪೊರೆದ ದಾತಾರನೊಳ್ |
ನುಡಿದ ಕಾರ್ಯವ ಮಾಳ್ಪೆನೆಂದು ||
ನುಡಿಗೆ ತಪ್ಪುವನಲ್ಲ ಮಡದಿಯ ಶಿರವನು |
ಕಡಿವೆನೀ ಕ್ಷಣದಿ ನಾನೆಂದ || 336 ||
ಎನ್ನುತೀ ಪರಿ ಭೂಪ ತನ್ನ ಮನದೊಳಾಗ |
ಓಂ ನಮಃ ಶಿವನೆಂದು ಬಳಿಕ ||
ಓಂ ನಮೋ ನಾರಾಯಣನೆನುತಲಿ ಸ್ಮರಿಸುತ್ತ |
ಖಿನ್ನನಾಗುತ ಧರಣಿಪನು || 337 ||
ಎತ್ತಿ ಖಡುಗವ ತಾ ಪತ್ನಿಯ ಶಿರವನ್ನು |
ಕತ್ತರಿಸುವೆ ನಾನೆಂದೆನುತ ||
ಹತ್ತಿರೆ ಪೋಗಲು ನೃಪ ಧರಿಸಿದ ಕರ |
ಕತ್ತಿಯು ಧರೆಗುದುರಿದುದು || 338 ||

**ಭಾಮಿನಿ**

ಧರಣಿಪತಿ ಕೇಳಿಂತು ಧೈರ್ಯವ |
ಧರಿಸಿದರು ತನ್ನ ರಸಿಯಳ ಶಿರ |
ಹರಿಸುವರೆ ಬಂದಪುದೆ ಮನ ಬಳಿಕಾಗ ಭೂವರನು ||
ಧರೆಗೆ ಬಿದ್ದಿಹ ಖಡುಗವನು ಮ |
ತ್ತೆರಡನೆಗೆ ಕೈಗೊಂಡು ಭೂಪತಿ |
ತರಣಿಹತ್ತಿರೆ ನಿಂದು ಕೈನೆಗಹಿದನು ಧೈರ್ಯದಲಿ || 339 ||

**ಸೌರಾಷ್ಟ್ರ - ತ್ರಿವುಡೆ**

ಪೃಥ್ವಿಪತಿ ಕೇಳಿಂತು ಪುನರಪಿ |
ಎತ್ತುತಲಿ ಖಡುಗವನು ಝಳಪಿಸ |
ಲತ್ತ ಸುರತರುಣಿಯರು ತಾವ್ ಮರು | ಗುತ್ತಲಿಹರು || 340 ||
ಹರಿಹರರು ವರ ಸರಸಿಜೋದ್ಭವ |
ರರಿತು ಬೇಗದಿ ಬಂದು ಭೂಪನ |
ಕರದ ಖಡುಗವ ಪಿಡಿದು ಪೇಳ್ದರು | ಭರದೊಳವಗೆ || 341 ||
ಮೆಚ್ಚಿದೆವು ಭೂಮಿಪನೆ ನಿನ್ನಯ |
ಇಚ್ಛೆಯೇನುಂಟೆಂಬುದರುಹೈ |
ಸಚ್ಚರಿತ ಬಲು ಸತ್ಯವಂತನು | ನಿಶ್ಚಯದಲಿ || 342 ||
ಕಡಿಯದಿರು ಮಡದಿಯನು ವ್ಯರ್ಥದಿ |
ನುಡಿಗೆ ತಪ್ಪಿದುದಿಲ್ಲ ನಿಶ್ಚಯ |
ಪೊಡವಿಯೊಳು ನೀನೆನಲು ಕೇಳುತ | ಲೊಡನೆ ಭೂಪ || 343 ||
ಕಂಡು ಪುಳಕೋತ್ಸವದ ಭಾರದಿ |
ದಂಡದಂತಿರೆ ನಮಿಸಿ ವರಪದ |
ಪುಂಡರೀಕಕೆ ಮಣಿದನಾ ಭೂ | ಮಂಡಲೇಶ || 344 ||

**ವಾರ್ಧಕ**

ಹರಿ ಸರ್ವಪರಿಪೂರ್ಣ ಹರ ಸರ್ವಚೈತನ್ಯ |
ಹರಿಕುವರ ಸೃಷ್ಟೀಶ ಹರಿ ನೀನೆ ನಿರ್ದೋಷ |
ಹರನೆ ಸರ್ಪಾಭರಣ ವರಶಾರದಾರಮಣ ಹರಿಯೆ ಹರ ಹರಿಪುತ್ರನೆ ||
ಹರಿಯೆ ಶರಧಿಜೆರಮಣ ಹರ ಶಂಭು ಪುರದಹನ |
ವರ ಹಂಸಸಂಚಾರಿ ಶಂಖಚಕ್ರಧಾರಿ |
ಉರಿನಯನ ಹರಿಮಿತ್ರ ಚತುರಾನನ ವಿಧಾತ್ರ ಹರಿಯೆ ಹರಿಮಿತ್ರ ವಿಧಿಯೆ || 345 ||

**ಕೇದಾರಗೌಳ - ಅಷ್ಟ**

ಎಂದು ಸಂಸ್ತುತಿಸಿ ವಂದಿಸಿ ಭಕ್ತಿಯಿಂದಲಿ |
ಬಂದು ಪ್ರದಕ್ಷಿಣೆಯ ||
ಚಂದದಿ ಕೈಯನು ಜೋಡಿಸುತವರೊಡ |
ನೆಂದನು ಮುದದಿ ರಾಯ || 346 ||

ವರಮುನಿಗಳು ನಿಮ್ಮ ನೋಡರು ತಪಗೆಯ್ದು |
ಸುರರು ಕಾಣರು ಸರ್ವಥಾ ||
ಪರಿಪರಿಯಿಂದಲಿ ಪೊಗಳುವ ವೇದವು |
ತೆರಳಿ ಪೋಪವು ಸಿಕ್ಕದೆ || 347 ||
ನರ ಕ್ರಿಮಿಗೆನಗೆ ನೀವ್ ದೊರಕಿದರಿಂದಲಿ |
ಹರಿದುದು ಭವಭಯವು ||
ಸರಿಯಾರು ಎನಗೆನುತಾನಂದಶರಧಿಯೊಳ್ |
ಧರಣಿಪ ಮುಳುಗಿದನು || 348 ||

**ಕಾಂಭೋಜಿ - ಝಂಪೆ**

ಧರಣಿಪತಿ ಕೇಳಿಂತು | ತರಣಿಕುಲಜನ ನೋಡಿ |
ಹರಿಹರಾದಿಗಳಿರಲು ಭರದಿ ||
ಪರಮಋುಷಿ ಕೌಶಿಕನು | ವರ ತ್ರಿಮೂರ್ತಿಗಳಿಂಗೆ |
ಎರಗಿ ಭೂಪತಿಗೆ ಪೇಳಿದನು || 349 ||
ತರಣಿಕುಲಜನೆ ನಿನ್ನ | ಸತ್ಯಕಾಂ ಮೆಚ್ಚಿದೆನು |
ಸರಿಯಾರು ನಿನಗೆ ತ್ರೈಜಗದಿ ||
ಪರಿಕಿಸಿದೆ ಬಹು ತೆರದಿ | ನಿನ್ನ ನಾನೆಂದೆನುತ |
ಒರೆದು ಬಳಿಕೆಂದ ಭೂಪತಿಗೆ || 350 ||
ಸತಿಸುತರ ಮಾರಿಸಿದೆ | ಸುತನನುರೆ ಮೂರ್ಛಿಸಿದೆ |
ಸತಿಯ ಕೊಲ್ಲುವರೆ ನಿಲ್ಲಿಸಿದೆ ||
ಮತಿಯುತನೆ ನಿನ್ನ ಚಂ | ಡಾಲನಿಗೆ ಮಾರಿಸಿದೆ |
ಧೃತಿಯ ಕೆಡಿಸಿದೆನು ಪತ್ನಿಯಳ || 351 ||
ಧಾರಿಣೀಶನೆ ಇಂತು | ಗೆಯ್ದೆನಪರಾಧವನು |
ತಾರದಿರು ಮನಸಿಗೆಂದೆನುತ ||
ಭೂರಿ ಕರುಣವ ತೋರಿ | ನುಡಿಯಲ್ಕೆ ಭೂಪತಿಯು |
ಚಾರು ಮುನಿವರಗೆಂದ ನಗುತ || 352 ||
ಆರೇನ ಗೆಯ್ಯುವರು | ದಾರಿಂದಲೇನಹುದು |
ಪ್ರಾರಬ್ಧಕರ್ಮವಶದಿಂದ ||
ತೋರಿತಲ್ಲದೆ ಕಷ್ಟ | ನಿನ್ನೊಳೇನಹುದೆನುತ |
ಧಾರಿಣೀಶನು ನುಡಿದ ಮುನಿಗೆ || 353 ||

**ಭಾಮಿನಿ**

ಚಂದ್ರಕುಲವರ ಕೇಳು ಬಳಿಕ ಮು |
ನೀಂದ್ರನೆಂದನು ಭೂಪನೊಳು ತವ |
ನಂದನನ ಪತ್ನಿಯನು ಸಹಿತಲಿ ಜೀವಿಸುವೆನೆನುತ ||
ಚಂದ್ರಮತಿ ಮೊದಲಾದವರನಾ |
ನಂದದಲಿಯೆಬ್ಬಿಸಿಯೆ ಮತ್ತಿಂ |
ತೆಂದ ವಿಶ್ವಾಮಿತ್ರಮುನಿಪನು ಧರಣಿಪಗೆ ಮುದದಿ || 354 ||

**ಸಾರಂಗ - ಏಕ**

ಕೇಳು ಭೂವರರಾಯ | ನಾ |
ಪೇಳುವೆ ಮಾತನು ಪ್ರೀಯ ||
ಪಾಲಿಸು ರಾಜ್ಯವ ಕೊಡುವೆನು ಪಿಂತೆಗೆ |
ಏಳೇಳೆಂದೆನೆ ಹರಿಹರರೆಂದರು || 355 ||
ಕೇಳಿದೆಯಾ ಮುನಿವಚನ | ನೀ |
ತಾಳದಿರು ಘನ ವ್ಯಸನ ||
ಪೇಳಿದಂದದಿ ಮುನಿ ಪಾಲಿಸು ರಾಜ್ಯವ |
ಬಾಲೆ ಬಾಲಕರನು ಲೀಲೆಯೊಳ್ ಕೂಡುತ || 356 ||
ಸರಸಿಜೋದ್ಭವ ಬರೆದ | ಹಣೆ |
ಬರಹವನು ತಾನದ ||
ಧರೆಯೊಳು ಮೀರಲಿನ್ನಾರಿಗು ತೀರದು |
ಸರುವಥ ಕೇಳೈ ಧರಣಿಪಾಲಕನೆ || 357 ||
ತಡವ್ಯಾಕೆ ಪೋಗಯ್ಯ | ತವ |
ಪೊಡವಿಗೆ ಎಲೆ ರಾಯ ||
ಬಿಡು ಬಿಡು ಮೌನವ ಎಂದೆನೆ ಕೇಳುತ |
ಪೊಡವಿಪ ನುಡಿದನು ಕಡುತರ ದೈನ್ಯದಿ || 358 ||

**ಭಾಮಿನಿ**

ಹರಿಹರರು ಲಾಲಿಪುದು ತವ ಪದ |
ಚರಣವನು ನಾ ಕಂಡ ಮೇಲೆ |
ನ್ನಿರದು ಭೂಮಿಯೊಳಾಸೆ ಕರೆದೊಯ್ಯುವುದು ನೀವೆನಲು ||
ಸಿರಿಯರಸ ತಾನೆಂದ ನಿನ್ನಯ |
ಪರಿಯನರಿತೆನು ರಾಜ್ಯವಾಳಿಯೆ |
ಬರುವೆ ನೀ ನಮ್ಮೊಡೆಗೆನುತ್ತೊಡಬಡಿಸಿದನು ಬಿಡದೆ || 359 ||

**ಸಾಂಗತ್ಯ - ರೂಪಕ**

ಧರಣೀಶ ಕೇಳಿಂತು ಭೂಪನ ಹರುಷದಿ |
ಹರಿಹರರಾಗ ಸಂತೈಸಿ ||
ತೆರಳಿದರ್ ತಂತಮ್ಮ ಪಟ್ಟಣದೆಡೆಗಾಗಿ |
ಪರಮ ಕೌಶಿಕಮುನಿ ಬಳಿಕ || 360 ||
ವರ ಕಾಶಿರಾಜನ ತರಳನ ಜೀವಿಸಿ |
ಕರೆದು ಭೂಪನಿಗಿತ್ತು ಬಳಿಕ ||
ಹರಿಶ್ಚಂದ್ರರಾಯನ ತರುಣಿಸುತರ ಸಹ |
ಕರೆತಂದ ಸಾಕೇತಾಪುರಕೆ || 361 ||
ಬಂದು ಸಿಂಹಾಸನವೇರಿಸಿ ಹರುಷದಿ |
ಕುಂದಣದುಂಗುರವಿತ್ತು ||
ಚಂದದಿಂದಾಶೀರ್ವದಿಸಿ ಹರಿಶ್ಚಂದ್ರ ನೃಪ |
ನೆಂದು ಡಂಗುರವ ಹೊಯ್ಸಿದನು || 362 ||

ಪುರುಹೂತ ಕಾಣುತ್ತ ಹೊಡೆಸಿದ ಭೇರಿಯ |
ಸುರತರುಣಿಯರು ಪೂಮಳೆಯ ||
ಧರಣಿಪನಂಗಕ್ಕೆ ಸುರಿಸುತಲಿರಲಾಗ |
ತರುಣಿಯರಾರತಿ ಬೆಳಗಿದರು || 363 ||

**ಢವಳಾರ - ಆದಿ**

ಮಂದಗಮನೆಯರೆಲ್ಲರು ಕೂಡಿ |
ಚಂದದಿ ಶೃಂಗಾರವ ಮಾಡಿ ||
ಚಂದಿರನಂದದಿ ಮುಖ ಥಳಥಳಿಸೆ |
ಇಂದಿರೆಮಿತ್ರನ ಕುಲಜಗೆ ಸ್ತ್ರೀಯರು |
ಕುಂದಣದಾರತಿಯ ಬೆಳಗಿರೆ || 364 ||
ಸತ್ಯಕೋಸುಗ ತನ್ನ ರಾಜ್ಯವನು |
ಇತ್ತು ಪೂರೈಸುತ ಭೂಮಿಪನು ||
ಪತ್ನಿಯು ಸುತ ವರಸಚಿವನು ಸಹಿತ |
ಮತ್ತೆ ಪುರಕೆ ಬಂದು ಸೌಖ್ಯದೊಳಿರುತ |
ಲರ್ತಿಯಿಂ ಧಾತ್ರಿಯನಾಳ್ದ ಭೂಪಾಲಗೆ |
ಮುತ್ತಿನಾರತಿಯ ಬೆಳಗಿರೆ || 365 ||
ಚಾರು ಹರಿಶ್ಚಂದ್ರ ಭೂಪನಿಗೆ |
ವರ ಚಂದ್ರಮತಿ ಸುತ ರೋಹಿತಗೆ ||
ಹರಿಯಂದದಿ ನಡು ಬಳುಕಿಸಿ ಮುದದಿ |
ಹರಿದು ಹರಿದು ಮುಂದೈತಂದು ಭರದಿ |
ಹರಿವೇಣಿಯರೆಲ್ಲ ಹರಿವಾಣದಿಂದಲಿ |
ಸುರುಚಿರದಾರತಿಯ ಬೆಳಗಿರೆ || 366 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಪಾವಂಜೆ ಗುರುರಾವ್ ಅಂಡ್ ಸನ್ಸ್, ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ

**ಪ್ರಸಂಗ ಪ್ರತಿ ಆಧಾರ:** ಪಾವಂಜೆ ಗುರುರಾವ್ ಅಂಡ್ ಸನ್ಸ್ ಪ್ರಕಟಿತ ಕೃತಿ

**ಪ್ರಸಂಗ ಪ್ರತಿ ಕೊಟ್ಟವರು:** ಡಾ. ರಾಧಾಕೃಷ್ಣ ಉರಾಳ್

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ರವಿ ಮಡೋಡಿ

**ಅಂತರಜಾಲ ಪ್ರತಿ ಬರವಣಿಗೆ:** ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ